ಪ್ರಚಾರಪುಸ್ತಕಮಾಲೆ—೪೧

ನಯಸೇನ

ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

...ಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
೧೯೪೨

...ಲೆ: ೨ ಆಣೆ

ಪುರಾಮರ್ಕೆಗಾನಿ

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ—
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ ಎಸ್ ಸಿ.

೨. ಸಮಾಜದ ರೋಗ ರುಜಿನಗಳು—
ಜಿ. ಹನುಮಂತರಾವ್, ಎಂ. ಎ

೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ. ಎ.

೪. ನವರತ್ನಗಳು—ಎಚ್. ಸುಬ್ಬಜೋಯಿಸ್, ಎಂ. ಎಸ್ ಸಿ.

೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ. ಎ

೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ. ಎ.

೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ. ಎ

೮. ಕನ್ನಡಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ. ಎ.

೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿ-ರಾವ್,
ಎಂ. ಎಸ್ ಸಿ.

೧೦. ಪಂಪ—ತೀ. ನಂ. ಶ್ರೀಕಂಠಯ್ಯ, ಎಂ. ಎ.

೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ. ಎಸ್ ಸಿ.

೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ. ಎ

೧೩. ಮದುವೆ—ನಾ. ಕಸ್ತೂರಿ, ಎಂ. ಎ., ಬಿ. ಎಲ್.

೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ. ಎ

೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್,
ಎಂ. ಎಸ್ ಸಿ., ಎಲ್ ಎಲ್. ಬಿ

೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ. ಎಸ್ ಸಿ.

೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ. ಎ.

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ-೪೧

ನಯಸೇನ

ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೭

ಮೊದಲನೆಯ ಮುದ್ರಣ ೩೦೦೨ ಪ್ರತಿಗಳು

೧೩-೮-೧೯೫೨

ಮುನ್ನುಡಿ

ಈ ಪ್ರಚಾರಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚು ವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು;

ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವು ದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದು ಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸು ವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾ ದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿ ದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾ ನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು, — ಇ. ಜಿ. ಮೆಕಾಲ್ಪೈನ್

ತಾ॥ ೨೪-೪-೧೯೪೨. — ವೈಸ್-ಛಾನ್ಸೆಲರ್

ಅರಿಕೆ

ಕಳೆದ ಬೇಸಗೆಯಲ್ಲಿ ಚಿಕ್ಕಮಗಳೂರು, ಚಳ್ಳಕೆರೆಗಳಲ್ಲಿ ನಾವು ಕೊಟ್ಟ ಎರಡು ಉಪನ್ಯಾಸಗಳನ್ನು ವಿಸ್ತರಿಸಿ ಈ ಪ್ರಬಂಧವನ್ನು ಬರೆದಿದ್ದೇನೆ. ಶ್ರೀಮಾನ್ ಜಿ. ಹನುಮಂತ ರಾಯರ ಪ್ರೋತ್ಸಾಹವೂ, ಶ್ರೀಮಾನ್ ಡಿ. ಎಲ್. ನರಸಿಂಹಾ ಚಾರ್ ಮತ್ತು ಶ್ರೀಮಾನ್ ಟಿ. ಎಸ್. ಶ್ರೀಕಂಠಯ್ಯ ಇವರ ಸಲಹೆಗಳೂ ಇಲ್ಲದಿದ್ದರೆ ನನ್ನ ಉಪನ್ಯಾಸಗಳು ಈ ರೂಪವನ್ನು ತಾಳುತ್ತಿರಲಿಲ್ಲ. ಮೊದಲಿನ ಹಸ್ತಪ್ರತಿಯನ್ನು ಸಿದ್ಧಮಾಡುವುದ ರಲ್ಲಿ ಶ್ರೀಮಾನ್ ಎಸ್. ಎಸ್. ರಾಮಸ್ವಾಮಿ ಐಯರ್ ಅವರು ನನಗೆ ನೆರವಾದರು. ಇವರೆಲ್ಲರಿಗೂ ನನ್ನ ಅನಂತವಂದನೆಗಳನ್ನು ಸಲ್ಲಿಸುತ್ತೇನೆ.

ಮಹಾರಾಜಾ ಕಾಲೇಜು, ಮೈಸೂರು,
೧೪—೮—೧೯೪೨. } ಜಿ. ವೆಂ.

ವಿಷಯಾನುಕ್ರಮಣಿಕೆ

೧.	ಪೀಠಿಕೆ	....	೧
೨.	ನಯಸೇನ	....	೬
೩.	ಧರ್ಮಾಮೃತ	....	೯
೪.	ದರ್ಶನದ ಕಥೆ	....	೧೧
೫.	ಅಹಿಂಸಾವ್ರತದ ಕಥೆ	....	೨೦
೬.	ಕೆಲವು ನೀತಿಕಥೆಗಳು	....	೪೩
೭.	ಧರ್ಮಾಮೃತದಲ್ಲಿ ಪರಮತವಿಡಂಬನ	....	೪೮
೮.	ನಯಸೇನನ ಉಪಮಾನಗಳು	....	೫೨
೯.	ಉಪಸಂಹಾರ	....	೫೮

ನಯಸೇನ

೧. ಪೀಠಿಕೆ

ಕಥೆಗಳನ್ನು ಕೇಳುವ ಕುತೂಹಲ ಮಾನವನ ಹುಟ್ಟುಗುಣ. ಅಜ್ಜಿ ಹೇಳುವ ಅಚ್ಚರಿಯ ಕಥೆಗಳಿಂದ ಮಕ್ಕಳ ವಿದ್ಯಾಭ್ಯಾಸ ಮೊದಲಾಗುತ್ತದೆ. ಮಕ್ಕಳಿಗೆ ಕಥೆ ಹೇಳಬೇಕೆಂದರೆ ಅಜ್ಜಿಗೂ ಅಷ್ಟೇ ಅಭಿಲಾಷೆ. ಈ ಕಥೆ ಹೇಳುವ ಕೇಳುವ ಅಭಿರುಚಿ ಬೆಳೆದ ಹಾಗೆಲ್ಲಾ ಕಥನಸಾಹಿತ್ಯ ಹೆಚ್ಚುತ್ತದೆ. ಕನ್ನಡದಲ್ಲಿ ಕಥನಸಾಹಿತ್ಯ ಯಾವಾಗ ಮೊದಲಾಯಿತೆಂದು ಹೇಳುವುದು ಕಷ್ಟ. ಇಲ್ಲಿಯ ವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದ ನೃಪತುಂಗನ 'ಕವಿರಾಜಮಾರ್ಗ' (ಕ್ರಿ.ಶ. ೮೧೪-೮೭೭) ದಿಂದ ಆದಕ್ಕಿಂತಲೂ ಹಿಂದೆ ಕನ್ನಡದಲ್ಲಿ 'ಗದ್ಯಕಥೆ' ಗಳಿದ್ದುವೆಂದು ಗೊತ್ತಾಗುತ್ತದೆ. 'ವಡ್ಡಾರಾಧನೆ' ಎಂಬ ಒಂದು ಜೈನ ಕಥೆಗಳ ಪುಸ್ತಕವೂ ಸಿಕ್ಕಿದೆ. ಆದುದರಿಂದ ಕನ್ನಡಕ್ಕೆ ಕಥನಕಲೆ ಬಹಳ ಹಳೆಯದೆಂದು ಹೇಳಬಹುದು. ಆದರೆ 'ವಡ್ಡಾರಾಧನೆ' ಯಾದ ಮೇಲೆ ಈ ರೀತಿಯ ಗ್ರಂಥಗಳೇ ಸಿಕ್ಕಿಲ್ಲ. ಇಂತಹ ಕಥೆಗಳನ್ನು ಮತ ಪ್ರಚಾರಕ್ಕೆ ಉಪಯೋಗಿಸಿಕೊಂಡು ಅವುಗಳಿಗೆ ಮೊದಲು ಜೀವಕಳೆಯನ್ನು ತುಂಬಿ ಕಳಕಳಿಸುವಂತೆ ಮಾಡಿದವನು ನಯಸೇನ. ಇವನ 'ಧರ್ಮಾಮೃತ' ವನ್ನು ಸವಿಯುವುದಕ್ಕೆ ಪೀಠಿಕೆಯಾಗಿ ಕೆಲವು ವಿಷಯಗಳನ್ನು ತಿಳಿದುಕೊಳ್ಳುವುದು ಆವಶ್ಯಕ.

ಸುಮಾರು ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಭದ್ರಬಾಹು ಮುನಿಗಳು ದಕ್ಷಿಣ ದೇಶಕ್ಕೆ ಬಂದಾಗಿನಿಂದ ಕರ್ಣಾಟ

ಕದಲ್ಲಿ ಜೈನಮತವು ಪ್ರಸಿದ್ಧವಾಗಿದೆ. ಮತಪ್ರಚಾರಕ್ಕೆ ಜನ ಸಾಮಾನ್ಯದ ಭಾಷೆಯೇ ಅತ್ಯುತ್ತಮ ಸಾಧನವೆಂಬುದನ್ನರಿತು ಜೈನರು ಕನ್ನಡದಲ್ಲಿಯೂ ಗ್ರಂಥರಚನೆ ಮಾಡಿದರು. ಜೈನರು ನೆಲಸಿದ ಕಡೆಯಲ್ಲೆಲ್ಲಾ ಸಾಹಿತ್ಯವೂ ವಿದ್ವತ್ತೂ ಉತ್ತೇಜನ ಹೊಂದಿದವು. ನಮಗೆ ತಿಳಿದುಬಂದಿರುವಮಟ್ಟಿಗೆ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಮೊದಲು ಕೆಲಸಮಾಡಿದವರು ಜೈನರು. ಅವರು ಬರೆದ ಗ್ರಂಥಗಳಲ್ಲಿ ಕೆಲವು ಇಂದಿಗೂ ಕನ್ನಡ ಸಾಹಿತ್ಯದ ರತ್ನಗಳಾಗಿವೆ.

ಜೈನರು ಯಾವ ಧರ್ಮಕಥೆಯನ್ನು ಬರೆದರೂ ಅದರಲ್ಲಿ ಸ್ವಲ್ಪ ಭಾಗವನ್ನಾದರೂ ಜೈನಮತಧರ್ಮದ ಬೋಧೆಗೆ ಮೀಸಲಾಗಿ ಡುತ್ತಿದ್ದರು. ತಮ್ಮ ಮತವನ್ನು ಹರಡಬೇಕೆಂಬ ಅಭಿಲಾಷೆ ಯೇ ಇದಕ್ಕೆ ಕಾರಣ. ಪಂಪನ 'ಆದಿಪುರಾಣ' ಮೊದ ಲ್ಗೊಂಡು ಅನೇಕ ಪುರಾಣಗಳು ಕನ್ನಡದಲ್ಲಿ ರಚಿತವಾದುವು. 'ತ್ರಿಷಷ್ಟಿಶಲಾಕಾಪುರುಷಪುರಾಣ' ಎಂಬ ಹೆಸರಿನ ಅರುವತ್ತು ಮೂವರು ಮಹಾಪುರುಷರ ಜೀವನ ಚರಿತ್ರೆಗಳು ಅವರಿಗೆ ಬಹಳ ಮುಖ್ಯವಾದುವು.* ಇವನ್ನು ದಿಗಂಬರರು 'ಪುರಾಣ'ಗಳೆಂದು ಕರೆಯುತ್ತಾರೆ; ಶ್ವೇತಾಂಬರರು 'ಚರಿತೆ'ಗಳು ಎಂದು ಕರೆ ಯುತ್ತಾರೆ. ಕರ್ಣಾಟಕದೇಶದಲ್ಲಿರುವುದು ದಿಗಂಬರಜೈನಮತ ಮಾತ್ರ. ಇಲ್ಲಿ ಶ್ವೇತಾಂಬರ ಪಕ್ಷವು ಪ್ರಚಾರಕ್ಕೆ ಬರಲಿಲ್ಲ.

ಮೇಲೆ ಹೇಳಿದ ಕನ್ನಡ ಪುರಾಣಗಳಿಗೆ ಸಂಸ್ಕೃತ ಅಥವಾ ಪ್ರಾಕೃತ ಗ್ರಂಥಗಳೇ ಆಧಾರ. ಮೊದಲನೆಯ ಅಮೋಘವರ್ಷ

---

* ಇವರಲ್ಲಿ ೨೪ ಜನ ತೀರ್ಥಂಕರರು ಮತ್ತು ಅವರ ಸಮಕಾಲಿಕರಾದ ೧೨ ಜನ ಚಕ್ರವರ್ತಿಗಳು, ೯ ಜನ ಬಲದೇವರು ೯ ಜನ ವಾಸುದೇವರು ಮತ್ತು ೯ ಜನ ಪ್ರತಿ ವಾಸದೇವರು ಇವರ ಚರಿತ್ರೆಗಳು ವಿವರಿಸಲ್ಪಟ್ಟವೆ.

(ಕ್ರಿ. ಶ. ೮೧೪-೮೭೭) ನ ಕಾಲದಲ್ಲಿ ಜಿನಸೇನನೆಂಬವನು 'ಮಹಾಪುರಾಣ' ವೆಂದು ಪ್ರಸಿದ್ಧವಾಗಿರುವ 'ತ್ರಿಷಷ್ಟಿಶಲಾಕಾ ಪುರುಷಪುರಾಣ' ವನ್ನು ಪ್ರಾರಂಭಮಾಡಿದನು. ಈ ಪುಸ್ತಕದ ಮೊದಲನೆಯ ಭಾಗದ ಕೊನೆಯ ಸ್ವಲ್ಪವನ್ನೂ ಎರಡನೆಯಭಾಗ ವನ್ನೂ ಜಿನಸೇನನ ಶಿಷ್ಯನಾದ ಗುಣಭದ್ರನು ಬರೆದು ಪೂರೈಸಿ ದನು. ಇದರ ಮೊದಲನೆಯ ಭಾಗವಾದ 'ಪೂರ್ವಪುರಾಣ' ದಲ್ಲಿ ಮೊದಲನೆಯ ತೀರ್ಥಂಕರನಾದ 'ಋಷಭ' ನ ಚರಿತ್ರೆಯು ವಿಸ್ತೃತವಾಗಿದೆ. ಎರಡನೆಯ ಭಾಗವಾದ 'ಉತ್ತರಪುರಾಣ' ದಲ್ಲಿ ಮಿಕ್ಕ ಮಹಾಪುರುಷರ ಚರಿತ್ರೆಗಳನ್ನು ಹೇಳಿದೆ. ಈ ಪುರಾ ಣದಲ್ಲಿ ಈ ಮಹಾಪುರಷರ ಜನ್ಮಾವಳಿಗಳು, ಅವರ ಬಂಧುಗಳ ಜನ್ಮಾವಳಿಗಳು, ಇತರ ಅನೇಕ ಕಥೆಗಳು, ಜೈನಧರ್ಮಪ್ರತಿ ಪಾದನೆ ಮುಂತಾದ ಅನೇಕ ವಿಷಯಗಳು ಕಂಡುಬರುತ್ತವೆ. ಸಂಕ್ಷೇಪವಾಗಿ ಹೇಳುವುದಾದರೆ ವೈದಿಕ ಇತಿಹಾಸಗಳಂತೆ ಇದೂ ಒಂದು ಸಕಲವಿಷಯಪರಿಪೂರ್ಣವಾದ ಇತಿಹಾಸ. ಈ ಗ್ರಂಥವು ಕನ್ನಡ ಕವಿಗಳಿಗೆ ತಾವು ಬಯಸಿದ ಮಣಿಯನ್ನು ಆರಿಸಿಕೊಳ್ಳಬಹುದಾದ ಗಣಿಯಾಯಿತು. ಪಂಪನು ಪೂರ್ವ ಪುರಾಣವನ್ನು ಸಂಗ್ರಹಿಸಿ, ತನ್ನ ಆದಿಪುರಾಣವನ್ನು ಬರೆದನು. ಅನೇಕ ನೀರಸವಾದ ಭಾಗಗಳೆಲ್ಲವನ್ನೂ ಬಿಟ್ಟು ತನ್ನ ಪ್ರತಿಭೆಯ ಸಹಾಯದಿಂದ ಆದಿಪುರಾಣವನ್ನು ಒಂದು ಉತ್ತಮಕಾವ್ಯವ ನ್ನಾಗಿ ಮಾಡಿದ್ದಾನೆ. ಇತರ ಕವಿಗಳು ತಮತಮಗೆ ಬೇಕಾದ ತೀರ್ಥಂಕರನ ಜೀವನ ಚರಿತ್ರೆಯನ್ನು ಆರಿಸಿಕೊಂಡು ಕನ್ನಡ ದಲ್ಲಿ ಪುರಾಣಗಳನ್ನು ಬರೆದರು.

ಆದರೆ ಈ ಪುರಾಣಗಳಲ್ಲಿ ಕವಿಗಳು ಸಂಸ್ಕೃತ ಮಹಾ ಕಾವ್ಯ ಶೈಲಿಯನ್ನು ಅನುಸರಿಸಿದ್ದರಿಂದ ಇವು ಹೆಚ್ಚಾಗಿ

ಪಂಡಿತ ರಂಜಕವಾದವು. ದೀರ್ಘವಾದ ಸಮಾಸಗಳು, ಶ್ಲೇಷೆ ಮುಂತಾದ ಕ್ಲಿಷ್ಟವಾದ ಅಲಂಕಾರಗಳು, ಅಷ್ಟಾದಶ ವರ್ಣನೆಗಳು, ಕಠಿನವಾದ ಭಾಷೆ, ಧರ್ಮವನ್ನು ಪ್ರತಿಪಾದಿಸುವ ಪ್ರೌಢವಾದ ರೀತಿ ಇವೇ ಮುಂತಾದ ಕಾರಣಗಳಿಂದ ಇವು ಜನಸಾಮಾನ್ಯದ ಕುತೂಹಲವನ್ನು ತೃಪ್ತಿಪಡಿಸುವುದು ಸಾಧ್ಯವಾಗಲಿಲ್ಲ. ಈ ವಿಚಾರಗಳನ್ನು ಕವಿಗಳು ಮನಸ್ಸಿಗೆ ತಂದುಕೊಳ್ಳಬೇಕಾದರೆ ಬಹಳ ಕಾಲ ಹಿಡಿಯಿತು. ಹನ್ನೆರಡನೆಯ ಶತಮಾನದ ಆದಿ ಭಾಗದಲ್ಲಿ ಕವಿಗಳು ಈ ತೊಂದರೆಯನ್ನು ಗಮನಿಸಿದ ಹಾಗೆ ಕಂಡುಬರುತ್ತದೆ. ಇವರಿಗೆ ಮೊದಲಿಗನಾಗಿ ಮಾರ್ಗದರ್ಶಕನಾದ ಕೀರ್ತಿ ನಯಸೇನನಿಗೆ ಸೇರತಕ್ಕದ್ದು.

ಪಾಮರರಂಜನೆಗಾಗಿ ಕಥಾ ಸಾಹಿತ್ಯವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲು ಬಯಸಿ ವೈದಿಕ ಮತ್ತು ಬೌದ್ಧ ಮತ ಗ್ರಂಥಗಳಲ್ಲಿ ಕಾಣುವ ಕಥೆಗಳನ್ನು ಜೈನರು ತಮ್ಮದನ್ನಾಗಿ ಮಾಡಿಕೊಂಡರು. ಇದರಿಂದ ಜನರಿಗೆ ತಮ್ಮಲ್ಲಿ ಬಳಕೆಯಾಗಿದ್ದ ಕಥೆಯೂ ಸಿಕ್ಕಿದ ಹಾಗಾಯಿತು. ಜೊತೆಗೆ ಜೈನ ಮತ ಪ್ರಚಾರವಾದ ಹಾಗೂ ಆಯಿತು. ಹೀಗಾಗಿ ಹರಿವಂಶದ ಕಥೆಗಳು ೨೨ ನೆಯ ತೀರ್ಥಂಕರನಾದ ನೇಮಿನಾಥನ ಚರಿತ್ರೆಯಲ್ಲಿ ಸೇರಿಹೋದುವು. ಗಂಗಾವತರಣದ ಕಥೆ, ಸಗರ ಕುಮಾರರ ಕಥೆ, ಬೌದ್ಧರಲ್ಲಿ ಪ್ರಚಾರದಲ್ಲಿರುವ ಕಿಸಾಗೋತಮಿಯ ಕಥೆ, ಇವೆಲ್ಲವೂ ವ್ಯತ್ಯಾಸ ಹೊಂದಿ ಜೈನ ಕಥೆಗಳಾದುವು. ಪಂಚತಂತ್ರ, ಬೃಹತ್ಕಥೆ, ಜಾತಕ ಕಥೆಗಳೂ ಕೂಡ ಜೈನ ರೂಪಾಂತರವನ್ನು ಪಡೆದುವು. ರಾಮಾಯಣ ಮಹಾಭಾರತಗಳಿಗೆ ಪ್ರತಿಯಾಗಿ ಜೈನ ಮಾರ್ಗದ ರಾಮಾಯಣ ಮಹಾಭಾರತಗಳ ರಚನೆಯೂ ಆಯಿತು. ರಾಮಾಯಣದ ರಾವಣನನ್ನು

ಪರಾಕ್ರಮಶಾಲಿಯಾದ ಉತ್ತಮ ಶ್ರಾವಕನನ್ನಾಗಿ ಜೈನರು ಮಾರ್ಪಡಿಸಿದರು. ಭಾರತದಲ್ಲಿ ಕೌರವರೂ ಕರ್ಣನೂ ಜೈನ ಮತಕ್ಕೆ ಸೇರಿದವರು. ಕೊನೆಗೆ ಪಾಂಡವರೂ ಸಂನ್ಯಾಸಿಗಳಾಗಿ ಮೋಕ್ಷಸಂಪಾದನೆ ಮಾಡುತ್ತಾರೆ.

ಜೈನ ಕಥಾಕೋಶವು ಇಷ್ಟಕ್ಕೇ ಮುಗಿಯಲಿಲ್ಲ. ಮಹಾವೀರನ ಶಿಷ್ಯರಾಗಿದ್ದು ಸುಗತಿಯನ್ನು ಗಳಿಸಿದ ಮಹಾಪುರುಷರ ಕಥೆಗಳೂ ಅನೇಕವಿವೆ. ಇದಲ್ಲದೆ ಸಂಸ್ಕೃತ ಪ್ರಾಕೃತಗಳಲ್ಲಿ ಇಂತಹ ಕಥೆಗಳನ್ನೊಳಗೊಂಡ ಅನೇಕ ಗ್ರಂಥಗಳಿವೆ. ಇವುಗಳಲ್ಲಿ ಪ್ರಪಂಚದ ಕಥಾ ಸಾಹಿತ್ಯದಲ್ಲಿ ಕಂಡುಬರುವ ಅನೇಕ ಕಥೆಗಳಿಗೆ ಸಾಮ್ಯಗಳು ಕಂಡುಬರುತ್ತವೆ. ಜೈನಮತ ಪ್ರಚಾರವು ಪ್ರಾರಂಭವಾದಂದಿನಿಂದ ಜನಸಾಮಾನ್ಯದ ತಿಳಿವಳಿಕೆಯಲ್ಲಿದ್ದ ಪ್ರತಿಯೊಬ್ಬ ಪೌರಾಣಿಕ ಮಹಾಪುರುಷನನ್ನೂ ತಮ್ಮವನನ್ನಾಗಿ ಮಾರ್ಪಡಿಸಿಕೊಳ್ಳಲು ಜೈನರು ಹವಣಿಸಿದರು.* ರಾಜಕಾರಣಪಟುವಾದ ಚಾಣಕ್ಯನನ್ನೂ ಅವರು ಜೈನನನ್ನಾಗಿ ಮಾಡಿದ್ದಾರೆ. ಈ ಎಲ್ಲ ಕಥೆಗಳ ಸಹಾಯದಿಂದ ಅವರು ತಮ್ಮ ಮತಧರ್ಮಗಳನ್ನು ಜನರಲ್ಲಿ ಪ್ರಚಾರ ಮಾಡಿದರು. ಕನ್ನಡದಲ್ಲಿ ಈ ಕೆಲಸ ಆರಂಭವಾದದ್ದು 'ವಡ್ಡಾರಾಧನೆ'ಯಲ್ಲಿ ಕಂಡುಬಂದರೂ ಅದಕ್ಕೆ ಕಳೆ ಉಂಟಾಗಿರುವುದು ನಯಸೇನನಿಂದ ಎಂದು ಹೇಳಬಹುದು.

---

* ಈ ವಿಷಯದಲ್ಲಿ ಹೆಚ್ಚು ವಿಷಯವನ್ನು ತಿಳಿಯಬೇಕೆನ್ನುವವರು ವಿಂಟರ್‌ನಿಟ್ಸ್ ಅವರ 'History of Indian Literature' ಎಂಬ ಗ್ರಂಥವನ್ನು ನೋಡಬೇಕು. vol II, page 486.

೨. ನಯಸೇನ

'ಧರ್ಮಾಮೃತ'*ವನ್ನು ರಚಿಸಿದ ನಯಸೇನನು ಧಾರವಾಡ ಜಿಲ್ಲೆಯಲ್ಲಿರುವ 'ಮುಳಗುಂದ' ಎಂಬ ಊರಿನಲ್ಲಿದ್ದವನು. ಅದನ್ನು ಬರೆದಾಗ ಕವಿ ಪ್ರಾಯಶಃ ಸಂನ್ಯಾಸಿಯಾಗಿದ್ದಿರ ಬೇಕೆಂಬುದಕ್ಕೆ ಅವನ ಗ್ರಂಥದಲ್ಲಿಯೇ ಆಧಾರವಿದೆ. ಇಷ್ಟು ಹೊರತು ಇವನ ತಂದೆ, ತಾಯಿ, ಆಶ್ರಯದಾತ ಮುಂತಾದ ವರ ವಿಚಾರದಲ್ಲಿ ಅವನು ಏನನ್ನೂ ಹೇಳಿಲ್ಲ. ಇದನ್ನು ನೋಡಿ ದರೆ ಅವನು ಯಾವ ರಾಜನ ಆಶ್ರಯದಲ್ಲೂ ಇದ್ದಂತೆ ಕಂಡು ಬರುವುದಿಲ್ಲ. ತನ್ನನ್ನು 'ನಯಸೇನ' 'ನಯಸೇನದೇವ' 'ನಯಸೇನಮುನೀಂದ್ರ' ಎಂದು ವಿವಿಧವಾಗಿ ಕರೆದುಕೊಂಡಿ ದ್ದಾನೆ. ಈತನಿಗೆ "ಸುಕವಿನಿಕರ ಪಿಕ ಮಾಕಂದ," "ವಾತ್ಸಲ್ಯ ರತ್ನಾಕರ", "ಸುಕವಿಜನಮನಃಪದ್ಮಿನೀರಾಜಹಂಸ" "ನೂತ್ನ ಕವಿತಾವಿಳಾಸ" ಎಂಬ ಬಿರುದುಗಳಿದ್ದಂತೆ ಇವನ ಗ್ರಂಥದಿಂ ದಲೇ ವ್ಯಕ್ತವಾಗುತ್ತದೆ.

"ಗಿರಿ ಶಿಖಿ ವಾಯುಮಾರ್ಗ ಶಶಿಸಂಖ್ಯೆಯೊಳಂವಗವೊಂದಿ ವರ್ತಿಸು
ತ್ತಿರೆ ಶಕಕಾಲಮುನ್ನತಿಯ ನಂದನ ವತ್ಸರದೊಳ್——........"

ತನ್ನ 'ಧರ್ಮಾಮೃತ'ವನ್ನು ಮುಗಿಸಿದೆನೆಂದು ಅವನೇ ಹೇಳಿರುವುದರಿಂದ ಈ ಗ್ರಂಥವು ಕ್ರಿ. ಶ. ೧೧೧೨ ನೆಯ ಇಸವಿಯಲ್ಲಿ ರಚಿತವಾಯಿತು.

---

* ಈ ಗ್ರಂಥವೊಂದೇ ಅಲ್ಲದೆ ನಯಸೇನನು ಕನ್ನಡದಲ್ಲಿ ಒಂದು ವ್ಯಾಕರಣವನ್ನೂ ಬರೆದಿರುವಂತೆ ಕಂಡುಬರುತ್ತದೆ. ಆದರೆ ಅದು ದೊರೆತಿಲ್ಲ.

ಜನಸಾಮಾನ್ಯಕ್ಕಾಗಿ ಸಾಹಿತ್ಯರಚನೆಮಾಡುವುದರಲ್ಲಿ ನಯಸೇನನು ಮೇಲ್ಪಂಕ್ತಿಯನ್ನು ಹಾಕಿದನೆಂದು ಹಿಂದೆ ಹೇಳಿದೆ. ಆದುದರಿಂದಲೇ ಅವನು ತನ್ನ ಹಿಂದಿನವರ ಶೈಲಿಯನ್ನು ಈ ರೀತಿ ಹಾಸ್ಯಮಾಡಿದ್ದಾನೆ.

ಪೊಸಕನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾಱದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ? ||

ಸಂಸ್ಕೃತದಲ್ಲಿ ಬರೆಯುವ ಹಾಗಿದ್ದರೆ ಆ ಭಾಷೆಯಲ್ಲಿಯೇ ಬರೆಯಬೇಕು. ಇಲ್ಲದಿದ್ದರೆ ಕನ್ನಡದಲ್ಲಿ ಬರೆಯಬೇಕು. ಹಾಗಿಲ್ಲದೆ ಸಂಸ್ಕೃತದ ದೀರ್ಘಸಮಾಸಗಳನ್ನೂ ಪ್ರೌಢ ಶೈಲಿಯನ್ನೂ ಕನ್ನಡದಲ್ಲಿ ಸೇರಿಸಿ ಕನ್ನಡಕ್ಕೆ ಹೊರೆ ಮಾಡಬಾರದು. ಇದರಿಂದ ಎಣ್ಣೆ ತುಪ್ಪಗಳನ್ನು ಸೇರಿಸಿದಂತಾಗಿ ಯಾವುದೂ ಭೋಗಯೋಗ್ಯವಾಗುವುದಿಲ್ಲ.

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ದಗನ್ನಡದೊಳ್ ತಂ
ದಿಕ್ಕುವುದೆ ಸಕ್ಕದಮಂ
ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ ||

ಹೀಗೆ ಹೇಳುವುದರಲ್ಲಿ ನಯಸೇನನ ಅಭಿಪ್ರಾಯವು ಕನ್ನಡದಲ್ಲಿ ಸಂಸ್ಕೃತಪದವೇ ಇರಕೂಡದು ಎಂದಲ್ಲ. ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಪದ್ಯದಲ್ಲಿ ಅವನೇ ಘೃತ, ತೈಲ, ಎಂಬೆರಡು ಸಂಸ್ಕೃತಪದಗಳನ್ನು ಉಪಯೋಗಿಸಿದ್ದಾನೆ. ಇದರಿಂದ ಅವನ ಅಭಿಪ್ರಾಯವನ್ನು ವಿವರಿಸಿ ಹೇಳಿದ ಹಾಗಾಗು

ತ್ತದೆ. ಸುಲಭವಾಗಿ ಅರ್ಥವಾಗುವ ಸಂಸ್ಕೃತಪದಗಳನ್ನು ಕನ್ನಡದಲ್ಲಿ ಉಪಯೋಗಿಸುವುದರಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ. ಕ್ಲಿಷ್ಟವಾದ ಪದಪ್ರಯೋಗದಿಂದ ಕವಿಯ ಆಶಯವೇ ನೆರವೇರಿದಂತಾಗುವುದಿಲ್ಲ. ನಯಸೇನನಿಗಿಂತ ಈಚೆಗಿದ್ದ ಆಂಡಯ್ಯನು ಸಂಸ್ಕೃತಪದವನ್ನೇ ಪ್ರಯೋಗಿಸದೆ ಗ್ರಂಥ ರಚನೆ ಮಾಡುವಂತೆ ಹಟತೊಟ್ಟ ಹಾಗೆ ನಯಸೇನನು ಶಪಥ ಮಾಡಲಿಲ್ಲವೆನ್ನುವುದು ಇದರಿಂದ ವ್ಯಕ್ತವಾಗುತ್ತದೆ.

ತನ್ನ ಕಾವ್ಯದಲ್ಲಿ ಸಹಜತೆಯಿದೆಯೆಂದು ನಯಸೇನನ ಹೆಮ್ಮೆ. ಸಹಜವಾಗಿಲ್ಲದೆ ಶಾಸ್ತ್ರಪಾಂಡಿತ್ಯದಿಂದ ಗ್ರಂಥರಚನೆ ಮಾಡಿದರೆ ಹೆಚ್ಚು ಜನರ ರಸಾಸ್ವಾದನೆಗೆ ಅವಕಾಶವಿರುವುದಿಲ್ಲ.

ಮೞೆಯಿಲ್ಲದೆ ಪೊಯ್ನೀರಿಂ
ಬೆಳೆಗುಮೆ ಧರೆ ಮಱುಗಿ ಕುದಿದು ಶಾಸ್ತ್ರದ ಬಲದಿಂ
ದಳಿಪಿಂ* ಪೇೞ್ವೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ? ॥

* ಅತ್ಯಾಸೆ

ಈ ಸಣ್ಣ ಕಾವ್ಯದಲ್ಲಿ ಜಿನಧರ್ಮವೆಂಬ ಸಮುದ್ರವನ್ನು ದಾಟಲು ಪ್ರಯತ್ನಪಟ್ಟ ತನ್ನ ದಿಟ್ಟತನವನ್ನೂ ಆತ್ಮಖಂಡನೆಯನ್ನೂ ಒಟ್ಟಿಗೆ ಮಾಡಿದ್ದಾನೆ.

ಪಱುಗೋಲೊಳ್ ವಾರ್ಧಿಯ ತಡಿ
ಗಱಿದೆ ಭರಂಗೆಯ್ದು ಪೋಪೆನೆಂಬಗ್ಗ†ನವೊಲ್
ನೆಱೆ ಜಿನಕಾವ್ಯಾಂಬುಧಿಯುಮ
ನುಱಿದೀಸುವೆನೆಂಬ ದಿಟ್ಟರೆಮ್ಮಂ ಪೆಱರಾರ್ ॥

† ಅಜ್ಞಾನಿ

ಆದರೂ ತನ್ನ ಕಾವ್ಯದಲ್ಲಿ ಜಿನಮತದ ಸಾರವೆಲ್ಲವೂ ಲೇಸಾಗಿ ಕಾಣುವಂತೆ ಮಾಡಿಪ್ಪೇನೆಂದು ಹೇಳಿಕೊಂಡಿದ್ದಾನೆ.

ಜಿನಮತದೊಳೆನಿತು ಸಾರಮು
ದನಿತುಂ ಲೇಸಾಗಿ ತೋರ್ಪುದೀ ಕೃತಿಯೊಳ್-ಆದೆಂ
ತೆನೆ ಕನ್ನಡಿಯೊಳಗೆ ಜಲ
ಕ್ಕನೆ ತೋರ್ಪವೊಲ್-ಇಭದ ರೂಪು ವಿಸ್ತರದಿಂದಂ ॥

ಕವಿಯ ಮಾತುಗಳು ಕೇವಲ ಜಂಭದ ಮಾತಲ್ಲವೆಂಬುದು ಅವನ ಗ್ರಂಥದ ಅವಲೋಕನದಿಂದ ವ್ಯಕ್ತವಾಗುತ್ತದೆ.

---

೩. ಧರ್ಮಾಮೃತ

ಕನ್ನಡದಲ್ಲಿರುವ ಅನೇಕ ಜೈನಗ್ರಂಥಗಳಿಗೆ ಸಂಸ್ಕೃತ ಅಥವಾ ಪ್ರಾಕೃತಗ್ರಂಥಗಳೇ ಆಧಾರವೆಂಬ ಮಾತನ್ನು ಹಿಂದೆ ಹೇಳಿದೆ. ಆದರೆ ನಯಸೇನನು ಯಾವೊಂದು ಸಂಸ್ಕೃತ ಗ್ರಂಥವನ್ನೂ ಅನುವಾದಮಾಡಿದಂತೆ ಕಂಡುಬರುವುದಿಲ್ಲ. ಸಂಸ್ಕೃತದಲ್ಲಿ 'ಧರ್ಮಾಮೃತ'ವೆಂಬ ಒಂದು ಗ್ರಂಥವೇನೋ ಇದೆ. ಆದರೆ ಅದು ಹದಿಮೂರನೆಯ ಶತಮಾನದಲ್ಲಿದ್ದ ಆಶಾಧರನೆಂಬ ಕವಿ ಬರೆದದ್ದು. ಅಲ್ಲದೆ ಅದರಲ್ಲಿ ಶ್ವೇತಾಂಬರ ಮತದ ಪ್ರಕಾರ ಸಾಗಾರರು (ಗೃಹಸ್ಥರು) ಮತ್ತು ಅನಾಗಾರರು (ಸಂನ್ಯಾಸಿಗಳು) ಅನುಸರಿಸಬೇಕಾದ ನಿಯಮಗಳನ್ನು ಹೇಳಿದೆ. ಕನ್ನಡ ಧರ್ಮಾಮೃತವು ದಿಗಂಬರಮತದ ಪ್ರಕಾರ ಜೈನಗೃಹಸ್ಥರು ಅನುಸರಿಸಬೇಕಾದ ವ್ರತ ಮುಂತಾದುವುಗಳನ್ನು

ಹೇಳುತ್ತದೆ. ಇದನ್ನು ನೋಡಿದರೆ ನಯಸೇನನು ಕಥೆಗಳನ್ನು ಬೇರೆ ಬೇರೆ ಕಡೆಗಳಿಂದ ಆರಿಸಿ ತನ್ನ ಗ್ರಂಥದಲ್ಲಿ ಉಪಯೋಗಿಸಿಕೊಂಡಿರಬಹುದೆಂದು ಕಾಣುತ್ತದೆ. ಆದರೆ ಆ ಎಲ್ಲ ಕಥೆಗಳನ್ನು ಹೇಳುವ ರೀತಿಯಲ್ಲಿ ನಯಸೇನನು ಒಂದು ಹೊಸ ಮಾರ್ಗವನ್ನು ಅನುಸರಿಸಿದ್ದಾನೆಂಬುದೇನೋ ನಿಜ.

ಕನ್ನಡ ಧರ್ಮಾಮೃತದಲ್ಲಿ ಜೈನದರ್ಶನ, ಅದರ ಎಂಟು ಅಂಗಗಳು ಮತ್ತು ಐದು ಅಣುವ್ರತಗಳು—ಇವುಗಳ ಮಹಿಮೆಯನ್ನು ಕವಿ ವರ್ಣಿಸಿದ್ದಾನೆ. ದರ್ಶನವೆಂದರೆ ವಿಚಾರವಿವೇಕಪೂರ್ವಕವಾಗಿ ಜೈನಮತದಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟಿರುವುದು. ಅಂದರೆ ಜೈನಧರ್ಮದಲ್ಲಿ ಸಂಪೂರ್ಣಜ್ಞಾನಪಡೆದು ಅದನ್ನು ಜೀವನದಲ್ಲಿ ಉಪಯೋಗಿಸಿಕೊಳ್ಳುವುದನ್ನು ಅರಿತಿರಬೇಕು. ಆ ದರ್ಶನದ ಅಂಗಗಳು ಎಂಟು.

'ನಿಶ್ಶಂಕೆ'=ಜೈನದರ್ಶನದಲ್ಲಿ ಸಂದೇಹವಿಲ್ಲದಿರುವುದು.

'ನಿಷ್ಕಾಂಕ್ಷೆ'=ಲೋಕದ ಸುಖಭೋಗಗಳಿಗೆ ಆಸೆ ಇಲ್ಲದಿರುವುದು.

'ನಿರ್ವಿಚಿಕಿತ್ಸೆ'=ದೇಹದಮೇಲೆ ಪ್ರೀತಿಯಾಗಲಿ ದ್ವೇಷವಾಗಲಿ ಇಲ್ಲದಿರುವುದು.

'ಅಮೂಢದೃಷ್ಟಿತ್ವ'=ಜೈನಮಾರ್ಗವನ್ನು ಬಿಟ್ಟು ಬೇರೆ ಮಾರ್ಗಗಳಿಗೆ ಹೋಗದಿರುವುದು.

'ಉಪಗೂಹನ'=ಜೈನಮತದಲ್ಲಿ ಸಂಪೂರ್ಣ ನಂಬಿಕೆ ಇಲ್ಲದಿರುವವರ ಸಂಶಯಗಳನ್ನು ನಿವಾರಣೆಮಾಡುವುದು.

'ಸ್ಥಿತಿಕರಣ'=ಆತ್ಮನು ಸರಿಯಾದ ನಂಬಿಕೆಯನ್ನು ಬಿಡದ ಹಾಗೆ ನೋಡಿಕೊಳ್ಳುವುದು.

‘ ವಾತ್ಸಲ್ಯ ’=ಜೈನಶ್ರಾವಕರಲ್ಲಿ ಪ್ರೀತಿಪೂರ್ವಕವಾದ ಗೌರವವನ್ನು ತೋರಿಸುವುದು.

‘ ಧರ್ಮಪ್ರಭಾವನೆ ’=ಜೈನಸಿದ್ಧಾಂತಗಳ ಮಹಿಮೆಯನ್ನು ಸಾರುವುದು.

‘ ಕೊಲ್ಲದ ಪುಸಿಯದ ಕಳವಿನಿ
ಸಿಲ್ಲದ ಪರವನಿತೆಯುರ್ಗೆ ಪದಪಿಂ ಚಿತ್ತಂ
ಸಲ್ಲದ, ಪರಿಗ್ರಹಕ್ಕಳಿ
ಸಿಲ್ಲದ

ಐದು ಅಣುವ್ರತಗಳು. ಹೀಗೆ ಈ ಹದಿನಾಲ್ಕು ವಿಷಯಗಳನ್ನೂ ಒಂದೊಂದು ಆಶ್ವಾಸದಲ್ಲಿ ವಿವರಿಸಿದ್ದಾನೆ. ಪ್ರತಿ ಆಶ್ವಾಸದಲ್ಲಿಯೂ ಆಯಾ ವಿಷಯದಲ್ಲಿ ಅತಿಶಯವಾದ ಗೌರವವಿಟ್ಟು ಮೋಕ್ಷಸಂಪಾದನೆ ಮಾಡಿದ ಮಹಾಪುರುಷರ ಕಥೆಗಳು ಬರುತ್ತವೆ. ‘ ಧರ್ಮಾಮೃತ ’ ದ ಪರಿಚಯವನ್ನು ಎರಡು ಕಥೆಗಳಿಂದ ಮುಂದೆಮಾಡಿ ಕೊಟ್ಟಿದೆ.

---

೪. ದರ್ಶನದ ಕಥೆ

ಜಂಬೂದ್ವೀಪದ ಮೇರುಗಿರಿಯ ದಕ್ಷಿಣ ಭಾಗದ ಭರತಕ್ಷೇತ್ರದಲ್ಲಿ ಸೌರಾಷ್ಟ್ರವೆಂಬ ರಾಜ್ಯವಿದ್ದಿತು. ಅಲ್ಲಿ ದಯಾಮಿತ್ರಸೆಟ್ಟಿ ಎಂಬ ವರ್ತಕನು ಅನುಪಮ ಐಶ್ವರ್ಯಕ್ಕೆ ಒಡೆಯನಾಗಿ ಸುಖವಾಗಿದ್ದನು. ಆತನು ಒಂದುಸಲ ದ್ರವ್ಯಾರ್ಜನಾ

ಭಿಲಾಷೆಯಿಂದ ವ್ಯಾಪಾರಕ್ಕಾಗಿ ಪರದೇಶಕ್ಕೆ ಹೊರಟನು. ಆಗ ವಸುಭೂತಿಯೆಂಬ ಬ್ರಾಹ್ಮಣನು ಬಂದು ತಾನು ಗಂಗಾಸ್ನಾನಕ್ಕೆ ಹೊರಟಿದ್ದುದಾಗಿಯೂ, ಯಾರೂ ಜೊತೆಗೆ ಸಿಕ್ಕದಿರಲು ಸೆಟ್ಟಿಯ ನೆರವನ್ನು ಆಶ್ರಯಿಸಿ ಬಂದೆನೆಂದೂ ಹೇಳಿದನು. ದಯಾಮಿತ್ರನು ಸಹಜವಾಗಿಯೇ ದಯಾಶಾಲಿಯಾದುದರಿಂದ ಆವನನ್ನು ಒಡಗೊಂಡು ಪ್ರಯಾಣ ಬೆಳಸಿದನು. ದಿನಕ್ಕೆ ಮೂರು ಗಳಿಗೆಯಷ್ಟು ಹೊತ್ತು ಧರ್ಮಶ್ರವಣವಿಲ್ಲದೆ ಸೆಟ್ಟಿಯು ಊಟಮಾಡುತ್ತಿರಲಿಲ್ಲವಾದುದರಿಂದ, ಪ್ರತಿನಿತ್ಯವೂ ತಾನೇ ಅಲ್ಲಿದ್ದ ಶ್ರಾವಕರಿಗೆಲ್ಲ ಧರ್ಮವನ್ನು ಹೇಳುತ್ತಿದ್ದನು. ಇದನ್ನು ನೋಡಿ ವಸುಭೂತಿಯು ಜೈನಮತವನ್ನೂ ಆ ಸೆಟ್ಟಿಯ ಗಾಂಪತನವನ್ನೂ ತನ್ನ ಮನಸ್ಸಿನಲ್ಲಿಯೇ ದೂಷಿಸಿದನು.

'ಕುಲಮಂ ಮಾಸಿಸಿ ವಿಸಾಹಮಂ† ತೊಱೆದು ಕಂಡರ್ ಪೇಸೆ
ಮೆಯ್ಯೊಳ್ ಮಹಾ † ಸ್ನಾನವನ್ನು
ಮಲಮಂ ತಾಳ್ದಿದ ಕಷ್ಟರಂ ಸವಣರಂ ಕಂಗೆಟ್ಟರಂ ಕಂಡು ಸಂ
ಚಲಚಿತ್ತಂ ಕುಲದೈವಮೆಂದು ಪದಪಿಂ ಕೊಂಡಾಡುವ-ಇಂತಪ್ಪ ಗಾ
ವಿಲನಂ ಗಾಂಪನನೆಗ್ಗನಂ ಜಡನನ್-ಆಂ ಕಾಣೆಂ ಮಹೀಚಕ್ರದೊಳ್ ॥'

ಹೀಗೆ ಸೆಟ್ಟಿಯನ್ನು ದೂಷಿಸಿ ಅವನನ್ನು ಕುರಿತು ಹೀಗೆ ಹೇಳಿದನು.

'ಎಲ್ಲೆಲ್ಲ ವಸ್ತುಗಳುಮಂ
ಬಲ್ಲಿರ್ ನಿಮ್ಮನ್ನರಿಲ್ಲ ಬುದ್ಧಿಗೆ ನೀವುಂ
ನಿರ್ಲಜ್ಜರಪ್ಪ ಸವಣರ
ಸೊಲ್ಲಿಂಗೆ-ಒಳಗಾದುದಕ್ಕೆ ನಾಂ ಬೆಱಗಾದೆಂ' ॥೧॥

ಮಲಮಂ ಧರಿಯಿಸಿ ನಾಣಂ †ಸೋಮಾರಿತನದಿಂದ
ತೊಲಗಿಸಿ ನಿರ್ಗ್ರಂಥ*ಮಿರ್ದು ಸೋಂಬಿಂ† ಪಲ್ಲಂ *ಬಟ್ಟೆಯಿಲ್ಲದೆ
ಸುಲಿಯದೆ ಮಿಾಯದೆ ಮುಳ್ಕದೆ§ §ಮುಳುಗದೆ
ಕುಲದಿಂ ಕೆಟ್ಟವರನಣ್ಣ ನೀಂ ಮನ್ನಿಪುದೇ? ॥ '

ಸೆಟ್ಟಿಗೆ ಜೈನಮತದಲ್ಲಿ ಸ್ಥಿರವಾದ ನಂಬಿಕೆಯಿತ್ತು. ವಸುಭೂತಿಯ ಮಾತುಗಳು ಅವನ ಮನಸ್ಸನ್ನು ನೋಯಿಸಿದುವು. ಅವನನ್ನು ಜೈನಮತಕ್ಕೆ ಸೇರಿಸಬೇಕೆಂದು ಮನಸ್ಸುಮಾಡಿದನು. ಶ್ರೇಷ್ಠವಾದ ಜೈನಧರ್ಮವನ್ನು ಒಂದೇ ಸಲ ಅವನಿಗೆ ಬೋಧಿಸಿದರೆ ಮಗುವಿನ ಕೈಲಿ ಕತ್ತಿಯನ್ನು ಕೊಟ್ಟಹಾಗೂ ಕಪಿಯ ಕೊರಳಿಗೆ ಹೂಮಾಲೆ ಹಾಕಿದ ಹಾಗೂ ಆಗುತ್ತದೆಂದು ಎಣಿಸಿ ಒಂದು ಉಪಾಯವನ್ನು ಹೂಡಿದನು. ಮಾರನೆಯ ದಿನ ವಸುಭೂತಿಯನ್ನು ಬರಿಸಿ.

' ಭಟ್ಟರೆ ಕೇಳಿಂ ನಿಮ್ಮಂ
ಬಿಟ್ಟರೆ ಕೆಲರ್-ಕುಲಜರೊಳರೆ‡ ನಂಬಿದೆನೀಗಳ್ ‡ಇದ್ದಾರೆಯೆ
ನೆಟ್ಟನೆ ನಿಮ್ಮಿಂ ಸುಗತಿಯ
ಬಟ್ಟೆಯ ತೆಱನ್ ಅಱಿಯಲಾಯ್ತು ಪುಣ್ಯೋದಯದಿಂ ॥

ಎಂದು ಹೊಗಳಿ " ನಮ್ಮ ವಂಶಪಾರಂಪರ್ಯವಾಗಿ ಬಂದ ಒಂದು ವ್ರತವಿದೆ. ಅದನ್ನು ನಡೆಸುವ ಕಾಲ ಹತ್ತಿರಕ್ಕೆ ಬಂದಿದೆ. ನಿಮ್ಮಂತಹವರು ಸಿಕ್ಕಿರುವಾಗ ಜೈನ ಮುನಿಗಳೇ ಆಗಬೇಕೆಂಬ ನಿಯಮವಿಲ್ಲ. ನೀವೇ ಆ ವ್ರತವನ್ನು ನಡೆಸಿ ಕೊನೆಯಲ್ಲಿ ಮನಸ್ಸಿಗೆ ಬಂದಷ್ಟು ದಕ್ಷಿಣೆಯನ್ನು ಕೇಳಬಹುದು" ಎಂದು ಹೇಳಿದನು. ಆ ಬ್ರಾಹ್ಮಣನಿಗೆ ಬಲು ಸಂತೋಷವಾಯಿತು.

ಬಿತ್ತರದಿಂ ಕುರುಡಂ ಕ
ಣ್ಬೆತ್ತಂತಿರೆ ರಾಗವೊದವೆ ಬೆಲೆವೆಣ್* ಪೆಣ್ಣಂ
ಪೆತ್ತಂತಿರೆ ಪಾರ್ವಂ ಮ
ಣ್ಬೆತ್ತಂತಿರೆ ಪಿರಿದು ಸಂತಸಂ ಮಿಗೆ ಮನದೊಳ್ ॥

*ಸೂಳೆ

" ಮರ್ದನಗುಟಿಲ್ಪೋದಂ ನಿಧಿಗಂಡಂತಿರೆ " ಉತ್ಸಾಹ ಗೊಂಡು ತನ್ನಲ್ಲಿ ಹೀಗೆ ಯೋಚಿಸಿದನು.

' ಒದವಿದ ಪೊನ್ನಪ್ಪೊಡೆ ಜೋ
ಳದ ರಾಸಿಯು ಪೊಲಿಪುರ್ದಿಲ್ಲಿ ತಾನೇನಂ ಬೇ
ಡಿದೊಡಂ ಬೇಡಿದುದಂ ಕುಡು
ವುದು ಪುಸಿಯೇ ? ವೈಶ್ಯನಂದನಂ ಪುಸಿದಪನೇ ? ॥

ನೆರಪಲ್ಬಾರದ ವಿತ್ತಂ
ದೂರೆಕೊಂಡುದು ನೆಲೆಗೆ ಪೋಗಿ ಮಕ್ಕಳೊಳಂ ಪೆಂ
ಡಿರೊಳವೊಡಗೂಡಿ ಸುಖದಿಂ
ಚರಿಯಿಸುವೆಂ ಮೆಚ್ಚಿದಂದದಿಂ ಭೋಗಿಸುವೆಂ ॥ '

ಹೀಗೆ ಮನಸ್ಸಿನಲ್ಲಿಯೇ ಹಾಲು ಕುಡಿದು ಕಡು ಚಪಳನಾಗಿ ಸೆಟ್ಟಿ ಹೇಳಿದ ವ್ರತದ ರೀತಿಯನ್ನು ಕೇಳಿದನು. ಸೆಟ್ಟಿ ಆ ಕ್ರಮವನ್ನು ಹೀಗೆ ವಿವರಿಸಿದನು. " ಅನ್ನವನ್ನೂ ತುಪ್ಪವನ್ನೂ ಇನ್ನೊಬ್ಬರ ಕೈಲಿ ಬಡಿಸಿಕೊಂಡು ಊಟಮಾಡಿ ಮಾರನೆಯ ದಿನ ಅದೇ ಹೊತ್ತಿನವರೆಗೆ ನೀರು, ಊಟ, ತಾಂಬೂಲ ಮೊದಲ್ಗೊಂಡು ಯಾವುದನ್ನೂ ನೆನೆಯದೆ ಮನೆಯಲ್ಲಿಯೇ ಓದುತ್ತಾ ಕುಳಿತಿರಬೇಕು. ಮೈ ಕೊಳೆಯಾಯಿತೆಂದು ಮಿಾಯಲಾಗದು. ಹಲ್ಲನ್ನು ತಿಕ್ಕಕೂಡದು. ವ್ರತಕ್ಕೆ ಮುಂಚೆ ನಿಮ್ಮ ತಲೆಯ

ಕೂದಲೆಲ್ಲವನ್ನೂ ತರಿದು ಬತ್ತಲೆ ಇರಬೇಕು. ಹೀಗೆ ಎರಡು ತಿಂಗಳವರೆಗೆ ವ್ರತವನ್ನು ಆಚರಿಸಬೇಕು.”

ಬ್ರಾಹ್ಮಣನಿಗೆ ಹಣದಾಸೆ ಹೆಚ್ಚಾಗಿದ್ದುದರಿಂದ ಈ ವ್ರತವನ್ನು ನಡೆಸುತ್ತೇನೆಂದು ಮನಸ್ಸು ಮಾಡಿದನು.

ಬಳಗಱಿಯದನಿತುಮಂ ಸಂ
ಚಳಚಿತ್ತಂ ಮಾೞ್ಪೆನೆಂದು ಪೂಣ್ದಂ ತನ್ನೊಂ
ದಳವಱಿಯದೆ ಕಡುಲೋಭದಿ
ನೆಳಗಱಿ ಭಯಮಱಿಯದೆಂಬವೊಲ್ ತದ್ವಿಪ್ರಂ ‖

ತನ್ನ ಕಡೆಯುವರು ಯಾರೂ ಹತ್ತಿರ ಇಲ್ಲವೆಂದು ಬ್ರಾಹ್ಮಣನಿಗೆ ಧೈರ್ಯವಾಯಿತು.

‘ ಆರಯ್ದು ನೋಡಿ ನಗುವವ
ರಾರೆನ್ನಂ ದೂರದೇಶಂ, ಆಂ ನೋಂಪೆಸಿದಂ
ಸ್ವೈರಣೆಯಿಂ, ಚೆಂಬೊಂಗಳ
ನೋರಂತಿರೆ ಬೇಡಿಕೊಳ್ವೆ ಎನ್ನ-ಆರ್ಪನಿತಂ ‖

ಉಸಿರದೆ ಗಳಿಗೆವರಂ ಸ್ವೈ
ರಿಸಿ ತಲೆಯುಂ ಪಱಿಸಿಕೊಂಡು* ಚೆಂಬೊನ್ನಂ ಸಂ
ತಸದಿಂ ಕೈಕೊಳ್ವೆಂ ಭಾ
ವಿಸುವೊಡೆ ತಲೆಯಲ್ಲಿ ಮತ್ತೆ ಪುಲ್ಮೊಳೆದಪುದೇ ? ‖’

*ಕೂದಲು [ಕೀಳಿಸಿಕೊಂಡು

ಮಾರನೆಯ ದಿನ ವ್ರತವಾರಂಭವಾಯಿತು. ತಲೆಯ ರೋಮಗಳೆಲ್ಲವನ್ನೂ ಕೀಳುವಾಗ ವಸುಭೂತಿಯ ಪಾಡು ನಾಯಿಪಾಡಾಯಿತು.

ತಲೆಯುಂ ಬಲುದಡಿಗ†ಕಿಟಿ ‡ ... †ದಂಡಧಾರಿ
ನಿಲಲಾಟಿಪೆ ಸುಂಟತಿಂದ ಕೋಡಗದಂತು
ವ್ಮೆಳಿಸಿ ಕಳವಳಿಸ್ಸಿ ನೋವಿಂ
ತಲೆಯುಂ ತಿರಿಪುತ್ತು ಮಂಜಿ ಕೆಟ್ಟೆನೆನುತ್ತುಂ ॥

ಬಿಡದೌಡುಗರ್ಚಿ ನೋವಿಂ
ದಡಿಗಡಿಗಹಹಾಯೆನುತ್ತು ಮೆಡಗಯ್ಯಿಂದಂ
ತಡವರಿಸುತ್ತುಂ ಸಾಸವೆ
ಗುಡಿದಂತಿರೆ ಕರಮೆ ಮಱುಗಿ ತಳವೆಳಗಾದಂ ॥

ಆಮೇಲೆ ಪಾಣಿಪಾತ್ರೆಯಲ್ಲಿ ಹಾಲು ಸಕ್ಕರೆ ಕುಡಿದು

ಸೊಗಯಿಪ ಘೃತಪೂರಂ ಹೋ
ಳಿಗೆ ಮಂಡಗೆ ತಱಗು ನಾಡೆ ರುಚಿವೆರಸಿದ ಲ
ಡ್ಡುಗೆ ಚಕ್ಕುಲಿ ಗಾರಿಗೆ ಪೂ
ರಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್ ॥

ಮೆದ್ದು, ಗಟ್ಟಿಯಾದ ಮೊಸರನ್ನು ಕುಡಿದಮೇಲೆ

ಕಳವೆಯಕೂಳ್ಮಗಮಗಿಸುವ
ತಿಳಿದುಪ್ಪಂ ತಿವುಡುಸ್ಸಗಳೆದ ಪೊಂಬೆಸಱ ಮಹೋ §ತವುಡು
ಜ್ವಳಮುಪ್ಪ ಕಂಪಿನಿಂಪಿನ
ನಿಳಯುಮುಮೆನಿಸಿರ್ದ ಸವಿಯಿನೊದವಿದ ತೊವೆಯಿಂ‡॥ ‡ತೊವ್ವೆ

'ಅಮೃತದೊಳ್ ಮಚ್ಚರಿಸುವ, ರಸಾಯನದೊಳ್ ಪುರುಡಿಸುವ ದಿವ್ಯಾಹಾರಮಂ ಆಕಂಠಮುಂಡು, ಬಱಲ್ಕೆ ವೋಗಿಪುದುಂ, ಆರ್ಪನಿತು ನೀರಂ ಕುಡಿದು, ಪಗಲೆಲ್ಲಂ ಸಂತಸದಿನಿರ್ದು' ರಾತ್ರಿಯಾದ ಮೇಲೆ ಬಾಯಾರಿಕೆ ಹೆಚ್ಚಾಗಲು

ಬಿಸುಸುಯ್ಯುತ್ತ, ಹುಲ್ಲಿನಲ್ಲಿ ಮುಚ್ಚಿದ ಕೋತಿ ಸಿಡಿಮಿಡಿಗೊಳ್ಳುವ ಹಾಗೆ ಸಿಡಿಮಿಡಿಗೊಳ್ಳುತ್ತ ಆ ರಾತ್ರಿಯ ನಾಲ್ಕು ಜಾವವೂ 'ಮೌಹೂರ್ತಿಕನಂತೆ ಪೊತ್ತಿನಳವಿಯಂ ನೋಡುತ್ತುಂ ಜಾವದ ಕಾಪಿನವರಂತೇಱುತ್ತುಂ, ಜಂಘಾಬಲವಿಲ್ಲದನಂತೆ ಕುಳ್ಳಿರುತ್ತುಂ, ಮರುಳನಂತೆ ತನ್ನೊಳ್ ತಾನೆ ನುಡಿಯುತ್ತುಂ, ಮಱಿಯಂ ಪಾರ್ವ ಒಕ್ಕಲಿಗನಂತೆ ಗಗನಮಂಡಲಮಂ ನೋಡುತ್ತುಂ, ಚಾದಗೆಯಂತೆ ಆಕಾಸವನಿಗೆ† ಬಾಯಂ ಬಿಡುತ್ತುಂ, ಕಪ್ಪೆಯಂತೆ ತಣ್ಪಪ್ಪೆಡೆಯೊಳ್ ಪತ್ತುತ್ತುಂ, ಚೊಚ್ಚಲ್ ಪೆಱುವಳಂತೆ ತೊಟಲುತ್ತುಂ, ಕಣ್ಣೊಳ್ ಬೆಳಗಾಗೆ,' ಮನಸ್ಸಿನಲ್ಲಿ ಈ ವ್ರತವನ್ನು ಬಿಟ್ಟರೆ ಚಿನ್ನದ ರಾಶಿ ಸಿಕ್ಕುವುದು ತಪ್ಪಿಹೋಗುತ್ತದೆ; ಧೈರ್ಯದಿಂದ ವ್ರತನಡೆಸೋಣವೆಂದರೆ ಬಾಯಾರಿಕೆಯಿಂದ ಪ್ರಾಣ ಹೋಗುತ್ತದೆ ಎಂದು ಯೋಚಿಸುವುದಕ್ಕೆ ಮೊದಲು ಮಾಡಿದನು. ಎರಡನೆಯ ದಿನವೂ ಬಾಯಾರಿಕೆಯ ತೊಂದರೆ ಹೆಚ್ಚಾಗಿದ್ದುದರಿಂದ ಮೂರನೆಯ ದಿನ 'ಭಕ್ಷ್ಯದ ದೆಸೆಗೆ ಪಕ್ಷಂಗೆಟ್ಟು, ಪಾಲಿಂಗೆ ಬೆರ್ಚಿ, ತುಪ್ಪಕ್ಕೆ ಇನಿಸಪ್ಪೊಡಂ ಮನಂದರಲಾಱದೆ' ಅವೊಂದೂ ಬೇಡ ಎಂದು ಹೇಳಿದನು. ದಯಾಮಿತ್ರ ಸೆಟ್ಟಿಯು 'ಆಱಿ ಪರಪ್ಪರಿಸಿಯುರ್ಮೊದಲಾಗಿಯುಸಿರದೆಮ್ಮ ಪೇೞ್ದಂತೆ ಮೋನದಿಂದುಂ ಬರೆಂದೊಡೆ, ಕುಲಜರುಂ ಭೂದೇವರುಮಪ್ಪ ನಿಮಗಿದಾವುದರಿದಾಯ್ತು ಉಸಿರದಿರಿಂ' ಎಂದು ಹೇಳಲು ಮರುಮಾತಾಡದೆ ಊಟಮಾಡಿದನು. ಹೀಗೆ ಏಳೆಂಟು ದಿನಗಳು ಕಳೆದಮೇಲೆ ಈ ವ್ರತಕ್ಕೆ ಸ್ಥೈರಣೆಗೆಟ್ಟು, ಗಾಳಿಗೊಡ್ಡಿದ ಸೊಡರಿನಹಾಗೆ ನಡುಗಿ, ಮಟದ ಬೆಕ್ಕಿನಹಾಗೆ ಒಳಗೊಳಗೆ ಓಡಾಡಿ, ಒದ್ದೆಯಾದ

† ಆಕಾಶದ ಹನಿ.

ತಮಟೆಯಂತೆ ಸದ್ದುಮಾಡದೆ ಹೀಗೆ ಹೇಳಿದನು. 'ಏಱಿನ† ಮೇಲೆ ಬಡಿಗೋಲು, ಕೊಲೆಯ ಮೇಲೆ ಕವರ್ತೆ ಯೆಂಬಂತೆ, ಸಂತಾಪದ ಮೇಲೆ ಸಂತಾಪಮಂ ಮಾಳ್ಪ ನಿನ್ನ ನೋಂಪಿ ಯೆಂಬ ಗರಗಸಕ್ಕೆನ್ನ ಮೆಯ್ಯನೊಡ್ಡಲಾಱೆಂ, ಮತ್ತಂ ಒಂದೆ ರಡು ತಿಂಗಳ್ ವಿಶೇಷವಾಗಿ ನೋಂತು ಕೊಟ್ಟಪೆಂ ಪಿರಿದ ಪ್ಪೆನ್ನುಮ್ಮಳಿಕೆ ಪೋಪಂತು ಕೆಱೆಗೆ ಪೋಗಿ ಮೆಯ್ಯಂ ಕರ್ಚಿ ಕೊಂಡು ಒರ್ಮೆಯಿರ್ಮೆ ನೀರಂ ಕುಡಿದು ನಿಮ್ಮ ಬೀಡಿನೊ ಳೊಂದೆರಡು ಗಳಿಗೆ ಸುೞಿದಾಡುವಂತೆ ಮಾಳ್ಪುದು' ಈ ಮಾತು ಕೇಳಿ ಸೆಟ್ಟಿ 'ಬಾಯ ತಂಬುಲಂ ಸೂಸೆ' ಕಳಕಳಿಸಿ ನಕ್ಕು

'ಕಡುಮೂರ್ಖರ್ ತಮ್ಮಿಚ್ಚೆಗೆ
ಪಿಡಿದುದೆ ಪಿರಿದೆಂಬರಣ್ಣ ಜಿನಮಾರ್ಗದೊಳೇಂ
ನಡೆಯಲ್ ಬರ್ಕುಮೆ ಬಾರದು
ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ?'

ಇದಕ್ಕಿಂತಲೂ ಕಷ್ಟತರವಾದ ಅನೇಕ ವ್ರತಗಳನ್ನು ನಡೆ ಸುವ ಋಷಿಗಳ ಧೈರ್ಯವನ್ನು ಹೊಗಳಲು ಯಾರಿಗೆ ಸಾಧ್ಯ. ನೀವು ಇಷ್ಟಕ್ಕೇ ಹಿಂತೆಗೆದಿರಲ್ಲಾ' ಎಂದು ಹೇಳಿದನು. ಆಗ ವಸುಭೂತಿಗೆ ಜೈನಧರ್ಮದ ಹಿರಿಮೆ ಗೊತ್ತಾಯಿತು. ತನಗೆ ಜೈನಧರ್ಮದ ತಿರುಳನ್ನು ತಿಳಿಸಬೇಕೆಂದು ಆ ಸೆಟ್ಟಿಯನ್ನು ಕೇಳಿಕೊಂಡನು. ಅವನು ವಸುಭೂತಿಗೆ ಅದೆಲ್ಲವನ್ನೂ ವಿವ ರಿಸಿ ಹೇಳಿದನು. ವಸುಭೂತಿ ಅದರಲ್ಲಿ ನಂಬಿಕೆಯಿಟ್ಟು, ಸತ್ತಮೇಲೆ ದೇವಲೋಕದಲ್ಲಿ ಮಣಿಕುಂಡಲನೆಂಬ ದೇವನಾಗಿ ಹುಟ್ಟಿದನು. ಒಂದು ಸಲ ದಯಾಮಿತ್ರನ ಹತ್ತಿರಕ್ಕೆ ಬಂದು

---

†ಗಾಯ

‘ನಿನ್ನ ಪ್ರಸಾದದಿಂದ ದೇವನಾದೆನೆಂ’ ದು ಹೇಳಿ ಜೈನದರ್ಶನದಲ್ಲಿ ನಂಬಿಕೆ ಬಲಿತು ಅನೇಕ ವರ್ಷಗಳು ದೇವಲೋಕದಲ್ಲಿ ಸುಖವನ್ನು ಅನುಭವಿಸಿದನು.

ಈ ಕಥೆಯ ಮುಖ್ಯ ಉದ್ದೇಶ ಜೈನಧರ್ಮವನ್ನು ನಂಬುವುದರಿಂದ ಆಗುವ ಸದ್ಗತಿಯನ್ನು ವರ್ಣಿಸುವುದು. ಅದನ್ನು ಸಾಧಿಸುವುದಕ್ಕೆ ಬೇಕಾದ ಜಾಣ್ಮೆಯನ್ನು ಕವಿ ಇಲ್ಲಿ ತೋರಿಸಿದ್ದಾನೆ. ಕಥೆಯಿರುವುದು ಸ್ವಲ್ಪವಾದರೂ ಅದನ್ನು ಬೆಳೆಸಿರುವ ರೀತಿ ಚೆನ್ನಾಗಿದೆ. ಕಥೆ ಹಾಸ್ಯದಿಂದ ತುಂಬಿ ಸ್ವಾರಸ್ಯವಾಗಿದೆ. ಇಲ್ಲಿ ವಸುಭೂತಿ ದುಡ್ಡಿನ ಆಸೆಯಿಂದ ಯಾವ ಕೆಲಸ ಮಾಡುವುದಕ್ಕೂ ಸಿದ್ಧನಾಗಿದ್ದಾನೆ. ಅವನಿಗೆ ಊಟವಮಾಡಿಸುವುದರ ಮೂಲಕವೇ ಸೆಟ್ಟಿಯು ಅವನಿಗೆ ಬುದ್ಧಿಕಲಿಸಲು ಪ್ರಯತ್ನಪಟ್ಟಿದ್ದಾನೆ. ಸನ್ನಿವೇಶ ಹಾಸ್ಯಮಯವಾಗಿದೆ. ಕೂದಲನ್ನು ಕೀಳಿಸಿಕೊಳ್ಳುವಾಗ, ಬಾಯಾರಿಕೆಯಿಂದ ಓದ್ದಾಡುವಾಗ ವಸುಭೂತಿಯ ಚಿತ್ರ ನಗುವನ್ನು ತರುತ್ತದೆ. ಈ ಕಥೆಯನ್ನು ಓದಿದಮೇಲೆ ವೈದಿಕ ಜನದ ಹುರುಳಿಷ್ಟೇಯೋ ಏನೋ ಎನ್ನುವ ಭ್ರಮೆ ಹುಟ್ಟುವಂತೆ ಕವಿ ಮಾಡಿದ್ದಾನೆ. ಎಲ್ಲ ಮತದವರಲ್ಲಿಯೂ ಇಂತಹ ಕಪಟ ವ್ಯಕ್ತಿಗಳಿರುತ್ತಾರೆ. ವಸುಭೂತಿಯನ್ನು ಇಂತಹವರ ಪ್ರತಿನಿಧಿಯೆಂದು ನಾವು ಹೇಳಬಹುದು. ಆದುದರಿಂದ ಧರ್ಮದ ದೃಷ್ಟಿಯನ್ನು ಬಿಟ್ಟರೂ ಸಹಿತ ಕವಿ ಇಲ್ಲಿ ಒಂದು ಬಗೆಯ ಸ್ಪಷ್ಟಹಾಸ್ಯವನ್ನು ತುಂಬಿ ಕಥೆ ಸ್ವಾರಸ್ಯವಾಗುವಂತೆ ಮಾಡಿದ್ದಾನೆ.

೫. ಅಹಿಂಸಾವ್ರತದ ಕಥೆ

ಕವಿಯ ಪರಿಚಯ ಪೂರ್ಣವಾಗಿ ಆಗಬೇಕಾದರೆ, ಆತನು ಜೀವಿಸಿದ್ದ ಕಾಲ, ಸಮಕಾಲಿಕವ್ಯಕ್ತಿಗಳು ಮತ್ತು ಸನ್ನಿವೇಶಗಳು ಇವುಗಳ ಪರಿಚಯವು ಎಷ್ಟು ಆವಶ್ಯಕವೋ ಕವಿಯ ಪದಬಂಧದ ಪರಿಚಯವೂ ಅಷ್ಟೇ ಆವಶ್ಯಕ. ಕವಿಗೆ ಯಾವ ವೃತ್ತಗಳ ಮೇಲೆ ಮಮತೆ ಹೆಚ್ಚು, ಯಾವ ಶೈಲಿಯಲ್ಲಿ ಆಸಕ್ತಿಯಿದೆ ಎಂತಹ ಅಲಂಕಾರಗಳಲ್ಲಿ ಪ್ರೇಮವಿದೆ ಎಂಬುದು ಅವನ ಪದಗುಂಫನವನ್ನು ನೋಡುವತನಕ ವ್ಯಕ್ತವಾಗುವುದಿಲ್ಲ. ಆದುದರಿಂದ ಧರ್ಮಾಮೃತದ ಒಂದು ಕಥೆಯನ್ನು ಕವಿಯ ಮಾತುಗಳಲ್ಲಿಯೇ ಸಂಗ್ರಹಿಸಿ ಮುಂದೆ ಕೊಟ್ಟಿದೆ.

ನೆಗಟ್ದಿರ್ದಾ* ಮಾಳವೋರ್ವೀವಳಯದೊಳಮರಾಧೀಶನಂತಪ್ಪ ಸದ್ಭೋ
ಗಿಗಳಿಂ ದೇವೇಂದ್ರಧಾತ್ರೀರುಹಮನಿಳಿಸಿ† ಕಯ್ವಾರದಿಂದೀ§ವ ಸತ್ತ್ವಾ
ಗಿಗಳಿಂ ಶ್ರೇಯಾಂಸನೊಳ್ ಮಚ್ಚರಿಸಿ ಬಿಡದೆ ನಿರ್ಲೋಭದಿಂದೀವ ಸದ್ದಾ
ನಿಗಳಿಂದುಜ್ಜಯಿನಿಯೆಂಬಾ ಪುರವರಮೆಸೆಗುಂ ನಾಡೆಯುಂ‡ ಶೋಭೆ
ಯಿಂದಂ ||

*ಪ್ರಸಿದ್ಧವಾದ, †ಹೀಯಾಳಿಸಿ, §ಹೊಗಳಿಕೆ, ‡ಹೆಚ್ಚು.

ಆ ಪುರಮನಾಳ್ವಂ ವಿಶ್ವಂಧರ ಮಹಾರಾಜನಾತನ ರಾಜಶ್ರೇಷ್ಠಿ ಗುಣಪಾಲನೆಂಬನಾತನ ಭಾರ್ಯೆ ಧನಶ್ರೀಯೆಂಬಳ್

ನೆಗಟ್ದಾ ಗುಣಪಾಲಂಗಂ
ಮೃಗನಯನೆಯೆನಿಪ ತದ್ಧನಶ್ರೀಗಂ ಕೈ
ಮಿಗೆ§ ರಾಗಂ ಪುಟ್ಟಿದಳು
ರ್ವಿಗೆ ಲಕ್ಷ್ಮಿಯೆ ಪುಟ್ಟುವಂತೆ ಕನ್ಯಾರತ್ನಂ ||

§ಹೆಚ್ಚಾಗು

ಸುಬಂಧುಶ್ರೀಯೆಂಬಳ್. ಅಂತವರ್ ಸುಖದಿಂದಿರ್ಪುದುಂ ಒಂದು ದಿವಸಂ ಧನಶ್ರೀ ಕನಸುಗಂಡು ನೇಸಱ್ ಮೂಡುವುದುಮೆೞ್ಚತ್ತು ಗುಣಪಾಲಸೆಟ್ಟಿಗಱಿಪುವುದುಂ ಸೆಟ್ಟಿ ತತ್ಸ್ವಪ್ನಫಲಂಗಳಂ ಋಷಿಯರಲ್ಲಿ ಬೆಸಗೊಳ್ವ[1]ಮೆಂದು ಬಸದಿಗೆ[2] ಬಂದು ಋಷಿಯರುಮಂ ವಂದಿಸಿ ಕನಸುಗಳ ಫಲಮಂ ಬೆಸಗೊಳ್ವುದುಂ ಅವರ್ 'ಅಧಿಕಜಿನಭಕ್ತನಂ ಮಹಾಪ್ರಭುವಂ ಮನೋಜನಿಭನಂ ಮಗನಂ ಪಡೆವೈ' ಎಂಬುದುಂ ಇರ್ವರುಂ ಸಂತಸದಂತಮನೆಯ್ದಿ ಮನೆಗೆ ವಂದಿರ್ಪುದುಂ ಧನಶ್ರೀಗೆ ಗರ್ಭಮಾಗಿ ಜಿನೇಂದ್ರಪೂಜೆಯಂ ಮಾಡಲುಂ ನೋಡಲುಂ, ಜಿನಮುನಿವರರಂ ವಂದಿಸಲುಂ ತ್ರಿಷಷ್ಟಿಶಲಾಕಾಪುರುಷರ ಕಥೆಗಳಂ ಕೇಳಲುಂ ಬಯಕೆ ತಿಣ್ಣಮಾಗೆ[3] ಜಿನಭವನಂಗಳೊಳ್ ನಾನಾವಿಧ ರಂಗವಲ್ಲಿಯನಿಕ್ಕಿಸುತ್ತುಂ ಪೊನ್ನಿಂ ಸಮೆದ ವಂಶಮಾಲೆಗಳಂ[4] ಕಟ್ಟಿಸುತ್ತುಂ ನಾನಾಧ್ವಜಂಗಳನೆತ್ತಿಸುತ್ತುಂ ದಾನಮುಂ ಮಾಡಿಸುತ್ತುಂ ಧನಶ್ರೀಯ ಬಯಕೆಯನೀಮಾರ್ಗದಿಂ ಸಲಿಸುತ್ತುಮಿರ್ಪುದುಂ ಒಂದು ದಿವಸಂ, ವಿಶ್ವಂಧರ ಮಹಾರಾಜಂ ಮಹಾವಿಭೂತಿಯಿಂ ಗಂಧಗಜಾರೂಢನಾಗಿ ವನಕ್ರೀಡೆಗೆ ಪೋಗುತ್ತುಂ ತನ್ನ ನಂದನವನದೊಳ್ ಪೊನ್ನುಯ್ಯಲನಾಡುವ ಸುಬಂಧುಶ್ರೀಯಂ ಕಾಣ್ಬುದುಂ ಕಾಮಂ ಕಾಮಿನಿಯಂ ಮಱೆಗೊಂಡಿರ್ದ ಪೊಸನನೆಯ[5] ಬಿರಿಮುಗುಳ ಕುಸುಮಬಾಣಂಗಳಿಂ ತೋಡುಂ ಬೀಡುಂ ಕಾಣಬಾರದೆನಿಸಿ ನೆಱನಱಿದೆಸೆವುದುಂ ಮಹಾರಾಜಂ ಜರ್ಝರಿತ ಗಾತ್ರನಾಗಿ ಚಿತ್ರದರೂಪಿನಂತೆ ಮಿಟ್ಟನೆ ಮಿಡುಕದೆ ನಿಂದು ವಿರಹಾನಳನಿಂ ಬೆಂದು ವನಕ್ರೀಡೆಗೆ ಪೋಗಲೊಲ್ಲದೆ ಅರಮನೆಗೆ ಬಂದು ಕಣ್ಣೊ

---

1 ಕೇಳೋಣ, 2 ಜೈನದೇವಸ್ಥಾನ, 3 ಹೆಚ್ಚಾಗಲು, 4 ತೋರಣ, 5 ಮೊಗ್ಗು.

ಳಂ ಮನದೊಳಂ ಸುಬಂಧುಶ್ರೀಯ ರೂಪೆ ತೋಱೆ[3] ಕಾಮ ಸಂತಾಪಮನೆಂತುಂ ಮಾಣಿಸಲಾಱದೆ ಪೆರ್ಗಡೆಗಳಂ ಕರೆದು 'ನೀವಿಂದು ಸುಬಂಧುವಂ ಎನ್ನೊಳ್ ನೆರಪುವುದು ನೆರಪದಂದು ನೋವೆಂ ತಿಬ್ಬಂ' ಎಂದು ಗುಣಪಾಲಸೆಟ್ಟಿಯಲ್ಲಿಗಟ್ಟುವುದುಂ ಆವರ್ ಸೆಟ್ಟಿಯ ಮನೆಗೆ ವಂದಿಂತೆಂದರ್ 'ನಿಮ್ಮ ಮಗಳಪ್ಪ ಸುಬಂಧುಶ್ರೀಯುಂ ನಂದನ ವನದೊಳ್ ವಿಶ್ವಂಧರ ಮಹಾರಾಜಂ ಕಂಡು ಕುಸುಮಶರದ ಕೋಳಿಂ[6] ಗಿರಲಾಱದೆ ಬೇಡಿಯಟ್ಟಿದಂ. ನೀವುಂ ಕುಲಸ್ವಾಮಿಗೆ ಮಾರ್ಕೊಳ್ಳದೆ ಕೂಸಂ ಕುಡುವುದೆಂಬುದಂ ಗುಣಪಾಲಸೆಟ್ಟಿ ಬೆಱಗಾಗಿ ಕೃತಕವಚನಂಗಳಿಂ ನಂಬೆ ನುಡಿದು ಪೆರ್ಗಡೆಗಳನರಮನೆಗೆ ಕಳಿಪಿ ತನ್ನೊಳಿಂತೆಂದಂ

'ಜಿನಪದಸೇವೆಯಿಲ್ಲದನ ರೂಪು ವಿಳಾಸ ಮಹೋನ್ನತಿಕ್ಕೆ ಮೇ
ದಿನಿ* ಸೊಬಗೊಳ್ಪು ತೇಜ ಮಹಿಮಾಸ್ಪದಮುದ್ಧತಿ ವಿದ್ಯೆ ಶೌಚಮಾ
ತನ ವಿಭವಂ ಕುಲಂ ದಲಮುಮಾರ್ಪು ಗುಣಾಳಿ ಗಾಡಿ§ ಯೌ
ವನಮಿನಿತುಂ ಕುಱುಂಬ‡ನರಸಗ್ನಿಯ ತಣ್ಪು ವಿಷಾನ್ನಭೋಜನಂ ॥

*ಭೂಮಿ, §ಸೌಂದರ್ಯ, ‡ಕುರುಬ.

ಮತ್ತಂ ಮಿಥ್ಯಾದೃಷ್ಟಿಯ ಸಿರಿಯನುರಿಯೆಂದು ಬೆಚ್ಚಲುಂ ಕುದೃಷ್ಟಿಯ ರೂಪು ಸಂತಾಪಮೆಂದು ನಡುಗಲುಂ, ದರ್ಶನದೂರನ ಶೃಂಗಾರಮಂ ಸಂಹಾರಮೆಂದು ಭಯಂಗೊಳಲುಂ ಶ್ರಾವಕಂಗೆ ಬೇಟ್ಪುದು. ಮಿಥ್ಯಾದೃಷ್ಟಿಯಪ್ಪನ ರೂಪುಮಂ ವಿಳಾಸಮುಮಂ ಪ್ರತಾಪಮುಮಂ ಸಂಪತ್ತುಮಂ ಕಂಡು ರಾಗಿಸಿ ಕೂಸು ಗುಡುವಂ ನರಕಕ್ಕೆ ಭಾಜನಮಕ್ಕುಂ,' ಎಂದು ಭಾವಿಸಿ ಧನ

---

6 ತೊಂದರೆ.

ಶ್ರೀಯ ಮನದ ನಿರ್ಮಳಿಕೆಯುಮಂ ಸಮ್ಯಕ್ತ್ವಮುಮ ನಾರಯಲೆಂದು ಗುಣಪಾಲಸೆಟ್ಟಿಯಿಂತೆಂದಂ

‘ ಧರಣೀವಲ್ಲಭನುಗ್ರವೈರಿಹರಣಂ ಬಾಲಾರ್ಕತೇಜಂ ಮಹೀ
ಶ್ವರವಂದ್ಯಂ ಮನವೊಲ್ದು ಸೋಲ್ತು ಪದಪಿಂ ಸದ್ರಾಗದಿಂದಟ್ಟಿದಂ
ಪಿರಿದುಂ ಸ್ನೇಹದಿನಿಂದು ಕೇಳ ಕನಕಾಂಭೋಜಾಕ್ಷಿಯಂ ಬೇಡಿ ನ
ಮ್ಮರಸಂ ನೋಡ ಸುಬಂಧುವಂ ಧರಣಿಯೊಳ್ ನಮ್ಮಂತು
ಮುಂ ನೋಂತರಾರ್ ॥

ಪರದರ* ಸಿರಿಯಿಂದರಸರ *ವರ್ತಕ
ಸಿರಿ ಸರಿಯಲ್ಲದೊಡೆ ಕೂಸನಿತ್ತೊಡಾತನ ದೆಸೆಯಿಂ
ಪಿರಿದಪ್ಪೊದವಿದ ಶೌರ್ಯಂ
ದೊರೆಕೊಳ್ಗುಂ ಮೇಲೆ ರಾಜ್ಯಮುಂ ಕೈಸಾರ್ಗುಂ ॥

ಸುಬಂಧುಶ್ರೀಯನರಸಂಗೆ ಕುಡುವಂ’ ಎಂಬುದುಂ ಧನಶ್ರೀ ಸೆಟ್ಟಿಯ ಮಾತಿಂಗೆ ವಿಸ್ಮಯಂ ಬಿಟ್ಟು ನೀರೊಳಗಿರ್ದ ನಲ್ಲಳ ನೆೞಲಂ ಕಂಡು ನಲ್ಲಳೆಂದು ಮತಿಗೆಟ್ಟು ಪಾಯ್ದು ಸಾವ ಸಾಧು ವಿಟನಂತೆ ನಿತ್ಯಮಲ್ಲದ ಸಂಸಾರ ಸುಖಕ್ಕಂ ಅಲ್ಪಶ್ರೀಗಮಾಸೆ ಗೆಯ್ದು ಮಿಥ್ಯಾದೃಷ್ಟಿಗೆ ಕೂಸಂಕೊಟ್ಟು ನರಕದುಃಖಮಂ ಮಾಡಿಕೊಂಡಪನೆಂದು ಮಱುಗಿ ಸೆಟ್ಟಿಗಿಂತೆಂದಳ್

‘ ಸಿರಿ ಭಾವಿಪೊಡೆತ್ತಾನುಂ
ದೊರೆಕೊಳ್ಗುಂ ಜೈನದರ್ಶನಂ ಧಾರಿಣಿಯೊಳ್
ದೊರೆಕೊಳ್ಳದದಱಿನಱಿವೊಡೆ
ಸಿರಿಗಂ ಸದ್ದರ್ಶನಕ್ಕಮೇನಂತರಮೋ ॥

ಕಲ್ಲುಂ ಕಬ್ಬುನಮುಂ* ನೋ *ಕಬ್ಬಿಣ
ಡೆಲ್ಲಿಯುಮೋರಂತೆ ಪಡೆಯಲಪ್ಪುದು ಪೊನ್ನಂ
ಸಲ್ಲಲಿತಮಪ್ಪ ರತ್ನಮ
ನೆಲ್ಲಿಯುಮೋರಂತೆ ಪಡೆಯಲಪ್ಪುದೆ ಧರೆಯೊಳ್ ॥

ಸಂಸಾರದೞ್ ಸಿರಿಗೆ ಅಳಿಪಿ ಮೂಱು ದಿನದ ಪಗರಣಕ್ಕೆ[7] ಗಡ್ಡಮೀಸೆ ಮಂಡೆಯಂ ಬೋೞಿಸಿಕೊಳ್ವಂತೆ, ಮುಂದಿರ್ದ ಕೆಱೆಯನೆಯ್ದಲಾಱದಲಸಿ ಕೆಸಱ ನೀರಂ ಕುಡಿವಂತೆ ಸ್ವರ್ಗ ಮೋಕ್ಷದೊಳಪ್ಪನಂತ ಸುಖಮಂ ನೀರೊಳೞ್ದು ನರಕ ತಿರ್ಯ ಗ್ಗತಿಗಳೊಳ್ ತಿಱ್ರನೆ ತಿರಿವ ಕಜ್ಜಮನೆತ್ತಿಕೊಳ್ವೊಡೆ ನೀಮ ಱಿವಿರ್; ನಿಮಗಾದಿತ್ಯಂಗೆ ಸೊಡರಂ ತೋಱಿಸಿದರೆಂಬಂತೆ, ತೊಱೆಗೆ ನೀರನಡಕಿದರೆಂಬಂತೆ ಎನ್ನಂತಪ್ಪ ಜಡಮತಿಗಳ್ ಬುದ್ಧಿವೇೞ್ವುದುಚಿತಮಲ್ಲದು; ಗಂಡನಿದಿರೊಳ್ ಪೆಂಡತಿ ನುಡಿಯಲಾಗದು, ಮಾಱಿಕೊಟ್ಟರಪ್ಪೊಡೆ ಎಮಗೆ ಬಸದಿಯೆ ಶರಣೆಂದು ನುಡಿದು ಮಾಣ್ಬುದುಂ ದರ್ಶನ ಶುದ್ಧೆಯುಂ ಸದ್ಧರ್ಮ ಸಮೇತೆಯುಮಪ್ಪ ಪೆಂಡತಿಯಂ ನಚ್ಚಿ ಕೂರ್ತು ಕೈಕೊಂಡಾತಂ ಬಲ್ಭೃತ್ರಮನೇಱಿದವನೆಂತು ಸಮುದ್ರ ದೊಳಾೞದೆ ಸುಖದಿಂ ಸಮುದ್ರದ ತಡಿಯನೆಯ್ದುಗುಂ ಅಂತೆ ಪೆಂಡಿರುಂ ತಾನುಂ ಸ್ವರ್ಗಮೋಕ್ಷಮನೆಯ್ದಿ ಪಿರಿದಪ್ಪ ಸುಖ ಮನೆಯ್ದುವರೆಂದು ಮನದೊಳೆ ಪೊಗೞ್ದು ಸುಬಂಧು ಶ್ರೀಯ ಸಮ್ಯಕ್ತ್ವಮುಮಂ ಅರಯಲೆಂದು ಮಗಳಂ ಕರೆದು ತೊಡೆಯ ನೇಱಿಸಿಕೊಂಡು ಕದಪಂ[8] ಕರ್ಚಿ ತಂಬುಲಮನಿಕ್ಕಿ ಗುಣ ಪಾಲಸೆಟ್ಟಿ ಮೆಲ್ಲನಿಂತೆಂದಂ

‘ನಿನ್ನಂತು ಮಗಳೆ ಪುಣ್ಯ
ಕ್ಕಿನ್ನೋಂತವರಾರೊ ಮಾಳವೇಶ್ವರನದಟಿಂ
ಸನ್ನುತ ಗುಣಗಣ ನಿಳಯಂ
ನಿನ್ನಂ ತನಗರಸಿ ಮಾಡಿದಪ್ಪಂ ಪದೆಪಿಂ ||

---

[7] ನಾಟಕ, [8] ಕೆನ್ನೆ.

ನೀನರಸಿಯಾದೆಯಪ್ಪೊಡೆ
ಮಾನವಪತಿ ನಿನಗೆ ಮುಖ್ಯಪದಮಂ ಕುಡುಗುಂ
ಶ್ರೀ ನಿಳಯೆಯಾಗಿ ಸುಖದಿಂ
ನೀನಿರ್ಪೈ ರಾಜ್ಯಲೀಲೆಯಿಂ ಕ್ರೀಡಿಸುತುಂ' ॥

ಎಂಬುದುಂ ಸುಬಂಧುಶ್ರೀ ತಂದೆಯ ಮಾತಿಂಗೆ ನಕ್ಕು 'ನಿಮ್ಮಂತಪ್ಪ ಮಹಾಪುರುಷರಿಂತಪ್ಪ ನಿರ್ಬುದ್ಧಿತನಮಂ ಮಾಡಲಾಗದು, ಈ ಶ್ರೀಗೆಱಗಿ ಧರ್ಮಮಂ ಬಿಡುವುದಾವ ಬುದ್ಧಿ, ಕಂಚಂ ಬಿಟ್ಟೋಡಂ ಪಿಡಿವ, ತಾಯಂ ಬಿಟ್ಟು ರಕ್ಕಸಿಯಂ ಪೊರ್ದುವ, ಭೂಪರಂ ಬಿಟ್ಟು ಪೊಲೆಯರಂ ಕೆಳೆಗೊಳ್ವ, ಕುದುರೆಯನೊಲ್ಲದೆ ನಾಯನೇಱುವ, ಪಟ್ಟದಾನೆಯಂ ಕೊಟ್ಟು ಕೋಡಗಮಂ ಕೊಳ್ವ, ನೆಲೆವಾೞಿಂ[9] ಬಿಟ್ಟು ತಿರಿದುಂಬ ಮರುಳಂ ಪೋಲ್ಕುಂ. ಬೆಕ್ಕುಪಾಲಂ ಕಾಣ್ಬುದಲ್ಲದೆ ಮೇಗೆಬಂದಡಸುವ ಬಡಿಗೆಯಂ[10] ಕಾಣದು. ಅಂತೆ ಮೂರ್ಖರಪ್ಪರುಮಿಲ್ಲಿಯ ಸುಖಮನೆ ಶಾಶ್ವತಮಾಗಿ ಕಾಣ್ಬರಲ್ಲದೆ ನರಕದೊಳಾದ ಮಹಾದುಃಖಮನಱಿಯರ್. ಎನಗಿಂತಪ್ಪ ಮಾಯಾ ವಚನಗಳಿಂ ಮಕ್ಕಳ ಕೈಯ ಮಾಣಿಕಮಂ ಗುಗ್ಗುರಿಯಂ ತೋಱಿ ನಂಬಿಸಿ ಕೊಳ್ವಂತೆ ಟಕ್ಕಿಕ್ಕಿ ಮಾತಾಡವೇಡ. ಜಿನಧರ್ಮಂ ಪ್ರಾಣಿಗಾಮರ್ಮಂ.[11] ಎನ್ನಂ ರಕ್ಷಿಸದೆ ಕರ್ಮರಾಜಂಗೆ ಮಗುಳೆ ಪಿಡಿದೊಪ್ಪಿಸುವುದು ಪಾೞಿಯಲ್ಲದು.[12] ಎಂತುಂ ನಿಮಗೆನ್ನ ಮೇಲೆ ಮುಳಿಸುಳ್ಳೊಡೆ ನಿಮಗೆ ಮೆಚ್ಚಿದ ದಂಡನೆಯಂ ಮಾಡಿಂ. ಏಗೆಯ್ದುಂ ಮಿಥ್ಯಾದೃಷ್ಟಿಗೆ ಕುಡುವೆವೆಂಬ ಬಗೆಯಂ ಮಾಣ್ಬುದು, ಎಂದು ಕಣ್ಣನೀರಂ ನೆಗಪುವುದುಂ ಗುಣಪಾಲಸೆಟ್ಟಿ ಮನದೊಳ್

---

[9] ಸ್ಥಿರವಾದ ಬದುಕು, [10] ಕೋಲು, [11] ಆಶ್ರಯ, [12] ಯೋಗ್ಯವಲ್ಲ

ಎನ್ನ ಗುಣಕ್ಕಂ ಬಗೆವಂ
ದೆನ್ನ ವಧೂಟಿಯು ಗುಣಕ್ಕಮೀಕೆಯುಗುಣಮು
ತ್ತುನ್ನತಮೆನಿಪುದವಱಿಂ
ದೆನ್ನಂತಾರ್ ಪುಣ್ಯವಂತರವನೀತಳದೊಳ್ ॥

ಎಂದು ತನ್ನ ಮನದ ಕಾರ್ಯಮನಿರ್ವರ್ಗಂ ತಿಳಿಯೆ ಪೇೞ್ದು

ತಡೆದಿಲ್ಲಿ ನಿಂದೆನಪ್ಪೊಡೆ
ಕುಡಮೇೞ್ಕುಂ ಭೂಭುಜಂಗೆ ಮಗಮಂ, ಕೂಸಂ
ಕಡುಗೂರ್ತು ಕೊಟ್ಟೆನಪ್ಪೊಡೆ
ಕಿಡುಗುಂ ಮೇಲಪ್ಪ ನಮ್ಮ ಮೋಕ್ಷದ ಸೌಖ್ಯಂ ॥

ಎಂದಾಲೋಚಿಸಿ ಧನಶ್ರೀ ಗರ್ಭಿಣಿಯಪ್ಪ ಕಾರಣದಿಂ ತನ್ನ ಪ್ರಾಣಮಿತ್ರನಪ್ಪ ಶ್ರೀದತ್ತನೆಂಬ ಪರದನ ಮನೆಯೊಳ್ ಗುಪ್ತದಿಂದಿರಿಸಿ ನೂಱೆಂಟು ಕೋಟಿ ಪೊನ್ನುಮಂ ಬಿಸುಟ್ಟು ಮಗಳನೊಡಗೊಂಡು ಪುರದಿಂ ಪೊಱಮಟ್ಟು ಕೌಶಾಂಬಿಯೆಂಬ ಪುರಮನೆಯ್ದಿ ಸಂತಸದಿಂದಮಿರ್ದನ್. ಇತ್ತಲರಸಂ ಗುಣಪಾಲಸೆಟ್ಟಿ ಪೋದನೆಂಬುದಂ ಕೇಳ್ದು ಬೆಱಗಾಗಿ

ಸುತೆಯುಂ ಕೊಟ್ಟೆನಗಖಿಳ
ಕ್ಷಿತಿಯುಮನಾಳ್ದಿರದೆ ಸುಖದಿನತಿಚಪಳಂ ದು
ರ್ಮತಿಯಾಗಿ ಬೆಚ್ಚಿ ಪೋಪೊಂ
ದತಿಶಯಮೇಕಿಂತುಪುಣ್ಯಹೀನರುಮೊಳರೇ ॥

ಎಂದು ಹಾಸ್ಯಂ ಮಾಡಿ ನಗುವರಸಂಗೆ, ಧರ್ಮದ ಮೋಹದಿಂ ಶ್ರೀಯುಮಂ ಸಂಪತ್ತುಮಂ ಉದಾಸೀನಂಮಾಡಿ ಕುಡಲೊಲ್ಲದೆ ಪೋದನೆಂಬುದುಂ ಮಹಾರಾಜಂ ಚೋದ್ಯಂಬಟ್ಟು[13] ಆತಂ

---

[13] ಆಶ್ಚರ್ಯ.

ನಂಬಿರ್ದುದೆ ದೈವಂ ವೈಶ್ಯವಂಶತಿಳಕಂ ಪಿಡಿದಿರ್ದುದೆ ಧರ್ಮಮೆಂದು ನಚ್ಚಿದನ್. ಗುಣಪಾಲಸೆಟ್ಟಿಯ ಮೇಲೆ ಮೋಹಮುಂ ಸ್ನೇಹಮುಮಾಗೆ ಅಱಿಸಿ ತನ್ನಿರೆಂದು ಪರಿಚಾರಕರನಟ್ಟಿದನ್.

ಇತ್ತ ಧನಶ್ರೀ ಮನಮಂ ಸಂತೈಸಿಕೊಂಡು ಕೆಲವು ದಿವಸಮಿರ್ಪುದುಂ ಒಂದು ದಿವಸಂ ಶಿವಗುಪ್ತರೆಂಬಾಚಾರ್ಯರ್ ತ್ರಿಗುಪ್ತರೆಂಬ ತಮ್ಮ ಶಿಷ್ಯರ್ವೆರಸು ಚರಿಗೆಗೆವರ್ಪುದುಂ ಶ್ರೀದತ್ತಸೆಟ್ಟಿ ಕಂಡು ನಿಲಿಸಿ

ಪದಪಿಂ ಶುದ್ಧಾನ್ನಮನೀ
ವುದುಮುಂಡು ಮುನೀಂದ್ರರಿರ್ವರುಂ ಕುಳ್ಳಿರೆ ಸಂ
ಮುದದಿಂ ಮುನೀಂದ್ರವಂದ್ಯನ
ಪದಯುಗಳಮನೊತ್ತುತಿರ್ದನಿರ್ಪನ್ನೆವರಂ ॥

ಧನಶ್ರೀ ವಂದಿಸಿ ಪೋಪುದುಂ ತ್ರಿಗುಪ್ತಮುನೀಂದ್ರಂ ವಿಸ್ಮಯಂ ಬಟ್ಟು ಶಿವಗುಪ್ತಭಟ್ಟಾರಕರ್ಗೆವಿನಯದಿಂದಿಂತೆಂದಂ

ಈವನಜಾಸ್ಯೆಗುತ್ತಮಗುಣಾನ್ವಿತೆಗಗ್ಗಳಭದ್ರಲಕ್ಷಣಂ
ತೀವಿದುವೈದೆ ಭಾವಿಸುವೊಡೆಲ್ಲೆಡೆಯಂ ನೆಱೆದೊಪ್ಪೆ ಚೆಲ್ವಿನಿಂ
ಶ್ರೀವಧುವನ್ನಳನ್ನಳೆನಿಸೀವಧುವುಂ ಕಡುಕಂದಿ ಕುಂದಿ ಸ †ಬಿಟ್ಟು
ದ್ಭಾವಮನೊಕ್ಕು† ಹೀನರವೊಲನ್ಯನಿವಾಸದೊಳಿರ್ಪುದಾರಿದೇಂ ॥

ಎಂಬುದುಂ ಶಿವಗುಪ್ತರಿಂತೆಂದರ್

ಅಂತೆನವೇಡ ಧಾರಿಣಿಯೊಳೀ ಲಲಿತಾಂಗಿಯೆ ಪುಣ್ಯವಂತೆ ಭೂ
ಕಾಂತನಡುರ್ತು ತನ್ನ ಮಗಳಂ ಕುಡವೇಟ್ಕೆನಲೀಕೆಯಾಣ್ಮನೋ
ರಂತೆ ಜಿನೇಂದ್ರಧರ್ಮಯುತನಲ್ಲದವಂಗೆ ಮಮಾತ್ಮಜಾತೆಯಂ
ಸಂತತಮೀಯೆನೆಂದು ಬಿಸುಟಗ್ಗದ ಧಾನ್ಯಧನಂ ಗೃಹಂಗಳಂ ॥

ಪೋಗುತ್ತುಮಿರಾ ವನಿತೆ ಗರ್ಭಿಣಿಯಪ್ಪುದಱಿಂದೊಡ

ಗೊಂಡು ಪೋಗಲೊಲ್ಲದೆ ಶ್ರೀದತ್ತಸೆಟ್ಟಿ ತನಗಿಷ್ಟನಪ್ಪುದಱಿಂದಲ್ಲಿ ಗುಪ್ತದೊಳಿರಿಸಿ ಪೋದನ್. ಇಂತೀ ಧನಶ್ರೀಯ ಗರ್ಭದ ಕೂಸೀಮಂಡಲಕ್ಕೆಲ್ಲಮೆಱೆಯ[14]ನಕ್ಕುಮೆಂದು ತಮ್ಮೊಳ್ ನುಡಿದು ಪೋಪುದುಂ ಶ್ರೀದತ್ತಸೆಟ್ಟಿ ಕೇಳ್ದು ಕಾರಣಮಿಲ್ಲದೆ ಮುಳಿದು :

ಈ ಸಸಿವದನೆಯ ಗರ್ಭದ
ಕೂಸೀ ದೇಶಕ್ಕೆ ಮುಖ್ಯನಪ್ಪಂ ಗಡ ನಾ
ನಾ ಸಿಸುವನುಪಾಯದೊಳೆ ವಿ
ನಾಶಂ ಮಾಡಲ್ಕೆವೇೞ್ಕುಮೆಂದತಿ ಮುಳಿಸಿಂ ॥

ಪೂರ್ವವೈರಮುಂಟಪ್ಪುದಱಿಂ ಮಸಗಿ[15] ಕೃತಕದಿನಿರ್ವರ್ ತೊೞ್ತಿರನೀ ಧನಶ್ರೀ ಪೆಱಲೊಡಮೆಮಗಱಿಪಿಮೆಂದು ಕಲಿಸಿ ಕೂರ್ಪರಂತೀ ಧನಶ್ರೀಗೆ ಸಂಘಾತಮಾಗಿರಿಮೆಂದಿರಿಸುವುದುಂ ಧನಶ್ರೀ ನವಮಾಸಂ ನೆಱೆದು ಗಂಡುಗೂಸಂ ಪೆಱುವುದುಂ ಮುನ್ನಮಿರಿಸಿದ ತೊೞ್ತಿ[16]ರಿರ್ವರುಂ ಪರಿತಂದು ಶ್ರೀದತ್ತಸೆಟ್ಟಿಗಱಿಪುವುದುಂ ಪರಿತಂದು ಕೃತಕದಿನಾಗಳ್

ಕುವಳಯನೇತ್ರೆಗೆ ಗರ್ಭ
ಸ್ರವಮಾದುದು ಕೆಟ್ಟೆನೆನಗೆ ಕೈಲೆಡೆ*ಯೆಂದೀ
ಧವಳಾಕ್ಷಿಯನಣ್ಣ ವಣಿ
ಗ್ಭವನಿರಿಸಿದನಕಟ ಪೊಲ್ಲದಾ†ಯ್ತೆಂದಾಗಳ್ ॥

*ಅಡವು
†ಕೆಟ್ಟದ್ದು

ಧನಶ್ರೀಯುಂ ಪಾಸಿನ[17] ಮೇಲೆ ಪಟ್ಟಿರಿಸಿ ಕೂಸು ಸತ್ತುದೆಂದು ಪುಸಿದು ಮೆಲ್ಲನೇಕಾಂತದೊಳೊರ್ವ ಕ್ರೂರನಪ್ಪ ಪೊಲೆಯಂಗೆ ಸಾಲ್ವನಿತು ಪೊನ್ನಂ ಕೊಟ್ಟು ಕೊಲ್ಲೆಂದಾತನ

---

[14] ಒಡೆಯ, [15] ಕೋಪಿಸಿ, [16] ತೊತ್ತು, [17] ಹಾಸಿಗೆ.

ಕೈಯೊಳ್ ಕೊಟ್ಟು ಕಳೆದಿತ್ತಲ್ ಧನಶ್ರೀಯ ಮನದ ಸಂಕಲ್ಪಂ ಪೋಪಂತಾಗೆ ಮಾಯಾವಿಪ್ರಳಾಪಂಗೆಯ್ಯೆ ಧನಶ್ರೀ ಅವನ ಮನದ ಕಪಟಮನಱಿಯದೆ ದುಃಖಮನಾಱಿಸಲೆಂದಿಂತೆಂದಳ್

ಕಱೆದವರ್ಗೇಕೆ ಪಂಬಲಿಪುದೇಕೆ ಪಲುಂಬುವುದೇಕೆ ಚಿತ್ತದೊಳ್
ಕೊಱೆವುದದೇಕೆ ಚಿಂತಿಸುವುದೇಕೆ ಬೞಲ್ವುದದೇಕೆ ದುಃಖದೊಳ್
ಮುೞುಗುವುದೇಕೆ ಬಾಯ್ವಿಡುವುದೇಕೆ ಕನಲ್ವುದದೇಕೆ ಶೋಕದೊಳ್
ಪೞಯಿಸು*ತಿರ್ಪುದೇಕೆ ಬಗೆಗೆಟ್ಟು ಬೞಲ್ವುದದೇಕೆ ನೋವುದೋ ॥*ಅೞು

ಬೇಡೆಂದು ಮಾಣಿಸುವುದುಂ ಮಾಯಾ ವಿಪ್ರಳಾಪಮಂ ಮಾಣ್ದು ಋಷಿಯರ ವಚನಮಂ ಪುಸಿಮಾಡಿದೆರ್ದೆಯಂ ನೀವಿ ಕೊಂಡು ಮಗವು ಸತ್ತುದೆಂದು ರಾಗಿಸಿರ್ದನಿತ್ತಲ್ ಪೊಲೆಯಂ ಪಸುಗೂಸಂ ನಿರ್ಮನುಷ್ಯಮಪ್ಪಡವಿಗೊಯ್ದು ಗಂಟಲಂ ಮುಱಿದು ಕೊಲ್ವೆನೆಂದು ಮಗವಂ ನೋಡುವುದು.

ಅರುಣತೆಯಿಂದಮೊಪ್ಪುವಧರಂ ಕನಕಚ್ಛವಿ ನೀಳ್ದ ಬಾಹು ಪಂ
ಕರುಹಮುಖಂ ನಿಮಿರ್ಕೆವಡೆದೊಪ್ಪುವ ನಾಭಿ ನೊಸಲ್ ಪೊದಳ್ದ ಭಾ
ಸುರತರಕೆಂಪಿನಿಂದೆಸೆವಪಾಣಿತಳಂ ನಸುಗೆಂಪನಾಳ್ವ ಸ
ತ್ತರಳ ವಿಲೋಚನೋದಯಮಗಲ್ದುರಮುನ್ನತಿವೆತ್ತ ಮಸ್ತಕಂ ॥

ಸೊಗಯಿಸಿ ತೋಱೆ ಕರಂ ಮಿಗೆ
ಮೊಗಮಂ ನೋಡುತ್ತೆ ನಲಿವ ಶಿಶುವಂ ಪೊಲೆಯಂ
ಮಿಗೆ ನೋಡಿ ನೋಡಿ ತನ್ನೊಳ್
ಬಗೆದಂ ದಯೆಪುಟ್ಟೆ ಮೋಹನೊದವಿರೆ ಮನದೊಳ್ ॥

ಕೊಲೆಯನುಡುಗಿ ಒಂದು ಪಳ್ಳದೊಳ್ ಮೞಲಂ ಬಗೆದು ಮಾವಿನೆಳದಳಿರ್ಗಳಂ ಪಾಸಿ ಕೂಸನಲ್ಲಿ ಪಟ್ಟಿರಿಸಿ[18] ನಾನೇಕೆ

---

18 ಮಲಗಿಸಿ,

ಪಾಪಮಂ ಮಾಡಿಕೊಳ್ವೆನೆಂದುಸಿರದೆ ಪೊದನನ್ನೆಗಂ ಇತ್ತಲಾತನ ಪುಣ್ಯಮೆ ಬರ್ಪಂತೆ ಶ್ರೀದತ್ತಸೆಟ್ಟಿಯ ಮೈದುನಸಿಂದ್ರದತ್ತಸೆಟ್ಟಿ ಆಲ್ಲಿ ಬಿಟ್ಟಿರ್ಪುದುಂ ಆತನ ಬೀಡಿನವರ್ ಇಂಧನಾರ್ಥಮತ್ತಿತ್ತ ತೊೞಲುತ್ತುಮೆಳದಳಿರ ಮೇಲೆ ಪಟ್ಟಿರ್ದು ನಲಿವ ಶಿಶುವಂ ಕಂಡು ಕೂಸಂ ನಿಧಾನಮನೆತ್ತುವಂತೆತ್ತಿಕೊಂಡು ಬಂದಿಂದ್ರದತ್ತಸೆಟ್ಟಿಗೊಪ್ಪಿಸುವುದುಂ ತನಗೆ ಮಕ್ಕಳಿಲ್ಲದುದಱಿಂ ತನ್ನ ಭಾರ್ಯೆ ಶ್ರೀದತ್ತನ ತಂಗೆಯಪ್ಪ ರಾಧೆಯಂ ಕರೆದು ನಿನಗೆ ಪುತ್ರಲಾಭಮಾಯ್ತೆಂದು ಶಿಶುವಂ ಕೊಟ್ಟು ಕೂಸಂ ತಂದವರ್ಗೆ ಗುಪ್ತದಿಂ ಬೇೞ್ಪನಿತು ಪೊನ್ನಂ ಕೊಟ್ಟು ಸೆಟ್ಟಿತಿ ಗೂಢಗರ್ಭದಿಂ ಗಂಡುಗೂಸಂ ಪೆತ್ತಳೆಂದೊಸಗೆಯುಮಂ ಜಿನಾಭಿಷೇಕ ಪೂಜೆಯುಮಂ ಮಾಡಿ ಸಂತೋಷದಿಂದಿರ್ಪುದುಂ (ಇದಂ ಶ್ರೀದತ್ತಸೆಟ್ಟಿ) ತೊಟ್ಟನೆ ಕೇಳ್ದು ಎನ್ನ ತಂಗೆಯಪ್ಪ ರಾಧೆಗೆ ಗರ್ಭಮಿಂದುವರಮಿಲ್ಲೆಂಬುದನಿಂಬಾಗಿ ಬಲ್ಲೆಂ ಭೋಂಕನೆ ಮಗನಂ ಪಡೆದಳೆಂಬ ಮಾತಾದುದು ಧನಶ್ರೀಯ ಮಗನಕ್ಕುಮೋ ವಿಪರೀತಮಿದನಾರ್ಗೆವೆನೆಂದು ತಂಗೆಯ ಮನೆಗೆ ವಂದು ಶಿಶುವಂ ಕಂಡಱಿದು ಕಲ್ಲಂ ತಾಗಿದ ಮಿಂಟೆ[19]ಯಂತೆ ಮುಟ್ಟುಗೆಟ್ಟು, ಬೇಸಗೆಯೊಳುಪ್ಪಂ ತಿಂದನಂತೆ ಮಲ್ಮಲಂ ಮಱುಗಿ ರಾಧೆಗೆ ಗರ್ಭಮಿಲ್ಲೆಂಬುದಂ ಬಲ್ಲೆನಿದೆನಗಾಶ್ಚರ್ಯಮಾದಪುದಿದನೆನಗಱಿವಂತಾಗೆ ಪೇೞಿಮೆನೆ ದಿಟಮಿಾತನೆನಗೆ ಕೂರ್ಪನೆಂದು ಪೇೞೆ ರಾಧೆಯ ಮಾತಂ ಕೇಳ್ದು ಪಿರಿದಪ್ಪುತ್ಸಾಹಮಂ ಮಾಡವೇೞ್ಪುದೆಂದು ಇಂದ್ರದತ್ತಸೆಟ್ಟಿಯುಮನೊಡಂಬಡಿಸಿ ರಾಧೆಯುಮಂ ಕೂಸುಮನುಜ್ಜಯಿನಿಗೊಡಗೊಂಡು ಬಂದು ಕಪಟೋತ್ಸಾಹಮಂ ಮಾಡಿ ಕೆಲವು

[19] ಪೆಂಟೆ.

ದಿವಸಂಬಱಿಕ್ಕೆ ನಿಷ್ಠುರನಪ್ಪೂರ್ವ ಮಾದೆಗಂಗೆ ಪಿರಿದಪ್ಪರ್ಥಮಂ ಕೊಟ್ಟೊಡಂಬಡಿಸಿ ಕೂಸು ಸತ್ತಿತೆಂದು ಮಾಡಿ ಮಾಯಾ ಪ್ರಳಾಪಮಂ ಪಣ್ಣಿ[20]

ಕಂದರ್ಪನಿಭಂ ತಂಗೆಗೆ
ನಂದನನುದಯಾರ್ಕತೇಜನಾದಂ ಲೇಸಾ
ಯ್ತೆಂದಿರ್ದೆನೆನ್ನ ತನು ದ
ಳ್ಳಿಂದುರಿದುಪೋದಪುದೀಗಳೆತ್ತ ಪೋಪೆನೊ ಕಱಿವೇ ||

ಎಂದು ಕೃತಕದಿಂ ಪ್ರಳಾಪಂಗೆಯ್ಯುತ್ತಿರ್ದನಿತ್ತಲ್ ಮಾದೆಗಂ ಕೂಸನಡವಿಗೊಯ್ದು ಗಂಟಲಂ ಮೆಟ್ಟಿ ಕೊಲ್ವೆನೆಂದು ಕೂಸಂ ಪೆಗಲಿಂ ನೆಲಕ್ಕಿೞಿಪುವುದುಂ ಇೞಿಯಲೊಲ್ಲದೆ ಮಾದೆಗನ ಪಱಿಗಡ್ಡಮನೆಡಗಯ್ಯೊಳ್ ಪಿಡಿದು ಬಲದ ಕೈಯೊಳ್ ಮೊಗಮಂ ಪೊಯ್ಯುತ್ತುಂ ಕುಂಕುಮದುರುಳಿ[21]ಯನನುಕರಿಸಿರ್ಪ ಮಡಂ[22]ಗಳಿಂದೆರ್ದೆಯನೊದೆಯುತ್ತುಮಿರೆ ದುರಾತ್ಮಂ ಶಿಶುವಿನ ರೂಪುಮಂ ಮುದ್ದಾಟಮುಮಂ ನೋಡಿ ಕರುಣಮುಂ ಸ್ನೇಹಮುಂ ತಿಣ್ಣಮಾಗೆ ಕೊಲಲಾಱದೆ ತೊಱೆಯ ಪುಳಿನಸ್ಥಳದೊಳ್ ಮಱಲ ಪಾಸಂ ಮಾಡಿ ಮೆಲ್ಲನಲ್ಲಿ ಪಟ್ಟಿರಿಸಿ ನಿನ್ನ ಮೆಚ್ಚಿದಂತಾಗೆಂದು ಪೋದನನ್ನೆಗಂ.

ತೊಱೆಯೊಳ್ ನೀರುಣಲೆಂದು ಬಂದು ತುಱುಗಳ್ ಪಟ್ಟಿರ್ದ*
ಪೂರ್ಣೇಂದುವಂ *ಮಲಗಿದ್ದ
ನೆಱ ಪೋಲ್ತುನ್ನತನಂ ಸುರೇಂದ್ರನಿಭನಂ ತದ್ಬಾಲನಂ ಕಂಡು ಮೂ
ಗಿಱುಯುತ್ತುಂ ಕುಡಿವಾಲನೆತ್ತಿ ಕೆನೆಯುತ್ತಾನಂದದಿಂ ಸುತ್ತಿ ಮು
ತ್ತಿಱಿದತ್ತಲವುಂಕಿ ಪೋಗದಿರೆ ಕಂಡೆಯ್ತಂದು ಗೋಪಾಲಕರ್ ||

---

[20] ಮಾಡಿ, [21] ಉಂಡೆ, [22] ಹಿಮ್ಮಡಿ,

ಇದೇನಾನೊಂದಾಶ್ಚರ್ಯವಾಗಲೆವೇೞ್ಕುಮೆಂದು ಬಳಸಿರ್ದ ಜೀವಧನಂಗಳಂ[23] ತೊಲಗಬಡಿದು ನೋೞ್ಪುದುಂ ಬಾಲಕನಂ ನಲಿಯುತಿರ್ದನಂ ಕಂಡು ನಮ್ಮಾಳ್ದಂಗೆ ಕುಡುವಮೆಂದು ಗೋಪಾಲರಾ ಶಿಶುವನೆತ್ತಿಕೊಂಡು ಬಂದು ಗೋವಿಂದನೆಂಬ ತುಱುಗಾಱಂಗೆ[24] ಕುಡುವುದುಮಾತಂ ಪೆಂಡತಿಯಪ್ಪ ನಂದೆಯೆಂಬ ತುಱುಗಾರ್ತಿಯಂ ಕರೆದು ಮಗನಂ ಕೊಟ್ಟು ಕೂಸಿಂಗೆ ಧನಕೀರ್ತಿಯೆಂದು ಪೆಸರಿಟ್ಟು ನಡಪುತ್ತುಮಿರ್ಪುದುಂ ಶುಕ್ಲಪಕ್ಷದ ಚಂದ್ರನಂತೆ ಬಳೆದು

ಧನಕೀರ್ತಿಕುಮಾರಂ ಕಾ
ಮನಿಭಂ ತುಱುಪಟ್ಟ†ಗರಸನಾಗಿರ್ಪಿನೆಗಂ †ದನಕಾಯುವರ
ಮನಮೊಲ್ದೊಂದುದಿನಂ ವೈ [ಹಳ್ಳಿ
ಶ್ಯನುತಂ ಶ್ರೀದತ್ತಸೆಟ್ಟಿ ಕರಮಾದರದಿಂ ॥

ತನ್ನ ಮಗಳಪ್ಪ ಶ್ರೀಮತಿಯ ಮದುವೆಯಂ ಮಾೞ್ಪೆನೆಂದು ತುಪ್ಪಮಂ ಕೊಳಲೆಂದು ತುಱುಪಟ್ಟಿಗೆವಂದು ಧನಕೀರ್ತಿ ಕುಮಾರನಂ ಕಂಡು

ಕೊಲ್ಲೆಂದಟ್ಟಿದೊಡಾತಂ
ಕೊಲ್ಲದೆ ಕಡುಕಷ್ಟನಾಗಿ ತುಱುಗಾರಂಗಿ
ತ್ತಲ್ಲಿಯುಮರ್ಥವನೋವದೆ
ಮೆಲ್ಲನುಪಾರ್ಜಿಸಿದನಕ್ಕುಮತಿಲೋಭತೆಯಿಂ ॥

ಆನೆಂತುಮಿವನಂ ಕೊಲ್ಲದೆ ಮಾಣೆನೆಂದು ಗೋವಿಂದನಂ ಬರಿಸಿ ಶ್ರೀದತ್ತನಿಂತೆಂದಂ

---

23 ದನ, 24 ದನಕಾಯುವವನು

ಪಿರಿದಪ್ಪವಸರಮಾದುದು
ಭರವಶದಿಂದೆನ್ನ ಪುತ್ರನಲ್ಲಿಗೆ ಬೇಗಂ
ಬರೆದೋಲೆಯನೀಗಳೆ ಚೆ
ಚ್ಚರದಿಂದಂ ಪೋಗಿ ಕುಡುವನಂ ತತ್ಕ್ಷಣದಿಂ ||

ನೀಂ ಪೇೞ್ವುದು

ಮತ್ತಿನ ಬಂಟರೊಳಾಗದು
ಚಿತ್ತಜನಿಭನೆನಿಪ ನಿನ್ನ ಮಗನಂ ಸೌಂದ
ರ್ಯೋತ್ತಮನಂ ಧನಕೀರ್ತಿಯ
ನುತ್ತಮಗುಣಗಣನನಟ್ಟವೇೞ್ವುದು§ ಬೇಗಂ ||

§ಬೇಕು

ಎಂಬುದುಂ ಗೋವಿಂದಂ ಶ್ರೀದತ್ತಂ ಮುಂ ಕೂರ್ತು ಕೊಟ್ಟ ದ್ರವ್ಯಾದಿಗಳಂ ನೆನೆದು ತನೂಜನಂ ಪೋಗವೇೞ್ವುದುಂ ಮಾಯಾಪುಂಜನ್ ಏಕಾಂತಕ್ಕೆ ಪೋಗಿ

ಎನಗೆ ಕೂರ್ಪಡೆ ಬೇಗದಿಂ ತಡವಿಲ್ಲದಿಂದೆ ಮಹಾಬಲಾ
ಮನೆಯ ಪಿತ್ತಿಲೊಳೀತನಂ ಪಿಡಿದೊಯ್ದು ಭೋಂಕನೆ ಕೊಂದು ನೆ
ಟ್ಟನೆ ಪೆಱರ್ಗನುರಾಗದಿಂದಮ ಪೇೞದೊರ್ವರ್ಗೆಯೆ ಗುಪ್ತದಿಂ
ಮನದೆಗೊಂಡುಱೆ ಪೂೞ್ವ*ವೆಂದು ಕಷಾಯದಿಂ ಬರೆದೋಲೆಯಂ ||

*ಹೂಳುವುದು

ಮುದ್ರಿಸಿ ಬೆಳಗಪ್ಪಜಾವದೊಳ್ ಧನಕೀರ್ತಿಯ ಕೈಯೊಳ್ ಕೊಟ್ಟಟ್ಟುವುದುಂ ಆತಂ ಪವನವೇಗದಿಂದುಜ್ಜಯಿನಿಗೆ ವಂದು ಪಥಶ್ರಾಂತನಾಗಿ ಸಿಂಪಾನದಿಯಂ ಪೊಕ್ಕು ಮೆಯ್ಯಂಕರ್ಚಿ[25] ಕೊಂಡು ತನ್ನದೀತೀರದೊಳೊಪ್ಪುವ ಕೆಂದಳಿರ ಮಾವಿನ ಕೆಳಗೆ ಪಟ್ಟಿರ್ದನ್. ಅನ್ನೆಗಮಿತ್ತಲ್ ಮೃಗಸೇನೆಯೆಂಬ ಸೂಳೆ ಪೊತ್ತುವೋಗಿಂಗೆ ಕೆಳದಿಯರ್ವೆರಸು ಪೊೞಲಿಂ[26] ಪೊಱಮಟ್ಟು

[25] ತೊಳೆದು, [26] ಊರಿನಿಂದ.

ಸಿಂಪಾನದಿಯ ತಡಿವಿಡಿದು ಬರುತ್ತುಂ ತಚ್ಚ್ಯುತಮಹೀಜಾತದ ಕೆಳಗೆ ಪಟ್ಟಿರ್ದನಂ ಕಂಡು ಕಳೆದ ಭವಮಂ ಕಣ್ಣುಱಿದು ದೆಂಬ ಮಾತಂ ದಿಟಂಮಾಡಿ ಸೋಗಿಲೊಳಿ[27] ರ್ದೋಲೆಯುಂ ಕಂಡು ತಾಂ ಜಾಣೆಯುಂ ಸಕಲಶಾಸ್ತ್ರಪ್ರವೀಣೆಯುಮಪ್ಪುದಱಿಂ ಮುದ್ರೆಯನೊಡೆದು ವಾಚಿಸಿ ಚಿಂತಾಕ್ರಾಂತೆಯಾಗಿ ಕುಮಾರನ ಮೋಹದಿಂ ಶ್ರೀದತ್ತನಟ್ಟಿದೋಲೆಯಂ ಸೀಳ್ದು ನದಿಯೊಳಿಕ್ಕಿ ಮನೆಯಿಂದೋಲೆಯುಮಂ ಕಂಠಮುಮಂ ತರಿಸಿ 'ಮಹಾಬಲ ನನಗೆ ಕೂರ್ಪನಪ್ಪೊಡೆ ಈ ಮೋಲೆಗಂಡಾಕ್ಷಣದೊಳೆ ಶೀಘ್ರಂ ತನ್ನ ತಂಗೆಯಪ್ಪ ಶ್ರೀಮತಿಯನೀತನೊಳ್ ತಡೆಯದಿಂದೆ ನೆರಪುವುದು. ಎನ್ನಾಣೆ ಕಡೆಗಣಿಸಬೇಡ.' ಎಂದು ಬರೆದು ಮುನ್ನಿನಂತೋಲೆಯಂ ಮುದ್ರಿಸಿ ಧನಕೀರ್ತಿಯ ಸೋಗಿಲೊಳಿಕ್ಕಿ ಪೋದಳ್. ಕುಮಾರನೆಚ್ಚತ್ತು

ಪೊಟಲೊಳಗೆ ಬಂದು ವೈಶ್ಯನ
ನಿಳಯಮನಾರಯ್ದು ಪೊಕ್ಕು ವೈಶ್ಯಾತ್ಮಜನಂ
ಬಲಯುತನಂ ಕಂಡು ಮಹಾ
ಬಲನಂ ಮಾತಾಡಿ ಮುನ್ನ ಮುಖವಾರ್ತೆಗಳಂ ||

ಶ್ರೀದತ್ತನಟ್ಟಿದೋಲೆಯ
ನಾದರದಿಂದೀಯೆ ಕಳೆದುಕೊಂಡಂತದನ
ತ್ಯಾದರದಿಂ ಪೊಡೆಮುಟ್ಟು
ಶ್ರೀದಯಿತಂ† ಬಿಟ್ಟು ನೋಡಿ ಸಂತಸದಿಂದಂ || †ಐಶ್ವರ್ಯವಂತ

ಕರಮೊಳ್ಪಿಕೆಯ್ದು ನಯ್ಯಂ
ಸ್ಮರಸದೃಶನನಿವನನೆನ್ನ ತಂಗೆಗೆ ವರನಾ
ಗಿರೆ ಮಾಡಿ ಬಗೆವೊಡೀಕೆಗೆ
ವರನೀತನೆ ತಕ್ಕನುಚಿದವರ್ ತಗ‡ಳೆಯೊಳ್ ||

27 ಮಡಲು ‡ಯೋಗ್ಯರಾಗುವುದಿಲ್ಲ

ಎಂದು ಶ್ರೀಮತಿಗಂ ಧನಕೀರ್ತಿಗಂ ಪಾಣಿಗ್ರಹಣಂ ಮಾಡಿ ಸುಖಮಿರ್ಪುದುಂ ಶ್ರೀ ದತ್ತಸೆಟ್ಟಿ ತುಱುಪಟ್ಟಿಯಂ ಪೊಱಮಟ್ಟುಜ್ಜಯಿನಿಗೆವಂದು ತನ್ನ ಮನೆಯಂ ಪೊಕ್ಕು ತನ್ನ ಮಗಳ್ಗೆ ಮದುವೆಯಾದ ಧನಕೀರ್ತಿಯಂ ಕಂಡು ಬೆಱಗಾಗಿ

ಇಂತಲ್ಲದೆ ಕೊಲಬಾರದು
ಸಂತತಮೀ ಖಳನನೆಂದುಪಾಯದೊಳಾನೇ
ಕಾಂತದೊಳೋಲೆಯನಟ್ಟಿದೊ
ಡಿಂತಾದುದು ಪುಣ್ಯಮುಳ್ಳವರ್ ಸತ್ತಪರೇ? ‖

ಎಂದು ಚಿಂತಿಸಿ ಶ್ರೀಮತಿ ರಂಡೆಯಾದೊಡಮಕ್ಕೆಂದು ಮತ್ತಂ

ಕ್ರೂರನಪ್ಪನನೊರ್ವನಂ ಕ್ಷಣದಿಂ ತಳಱಿನ§ ನಂಟನಂ §ತಳವಾರ
ಬೀರನಂ ಕರೆದೊಯ್ದು ನಾತನ ಬೇಡಿದರ್ಥಮನಿತ್ತು ಸಂ
ಹಾರಿಸಿಂದುರಗಾಲಯಕ್ಕೆ* ನಿವೇದ್ಯಮಂ ಶುಚಿಯಾಗಿವಿ *ನಾಗರಾಜನ
ಸ್ತಾರದಿಂದಿರುಳಣ್ಣ ತಂದವನಂ ವಿಚಾರಿಸದಾಕ್ಷಣಂ ‖ [ದೇವಸ್ಥಾನ

ಎಂದು ನಾಗಾಲಯದೊಳಾತನನಿರಿಸಿ ಬಂದು ಮನೆಯವರನಱಿಯಲೀಯದೆ ಅಳಿಯನಪ್ಪ ಧನಕೀರ್ತಿಯಂ ಬೇಱೆ ಕರೆದು ನಾಗೇಂದ್ರಂಗೆ ನಿನ್ನಿಂದಮೆ ಚರುವ[28] ನಿಡಿಸುವೆನೆಂದು ಪರಸಿಡೆಸದಂ ನಾಗಾಲಯದ ಧರಣೇಂದ್ರಂಗೆ ತೋಱು ಬಾಯೆಂದು ಬೇಱೊಂದು ಮನೆಯೊಳಿರಿಸಿದ ಚರುಗಮಂ[29] ಕುಡುವುದುಂ, ಆತನಂ ಮಹಾಬಳನಿದಿರೊಳ್ ಕಂಡು ಎಲ್ಲಿಗೆ ಪೋದಪೆಯೆಂದು ಬೆಸಗೊಳ್ವುದುಂ ಧನಕೀರ್ತಿ ಮಾವಂ ಬೆಸಸಿದೊಡೆ ಪೋದಪೆನೆಂಬುದುಂ ಮಹಾಬಲಂ ತಮ್ಮಯ್ಯಂಗೆ ಮುನಿದು ಮೈದುನನ ಕೈಯ ಚರುವಂ ಕಳೆದುಕೊಂಡು ನಾಗಾಲಯಕ್ಕೆ

---

[28] ಅನ್ನ, [29] ಅನ್ನ.

ಒರ್ವನೆ ಬಂದು ಪುಗುವುದುಂ[ಆವಂ]ಇಱಿದು ಕೊಂದು ಮಹಾ ಬಲನಂ ಓಡಿದನಂಜಿ ನಿರ್ದಯಂ. ಇತ್ತಲ್ ಧನಕೀರ್ತಿಯಂ ಶ್ರೀದತ್ತಸೆಟ್ಟಿ ಕಂಡು ವಿಸ್ಮಯಂಬಟ್ಟು ಬೆಸಗೊಳ್ವುದುಂ ಧನ ಕೀರ್ತಿ ಎಮ್ಮ ಭಾವನುದಾರಗುಣಂ ಎನ್ನ ಕಯ್ಯ ಚರುವಂ ಕಳೆದುಕೊಂಡು ನಾಗಾಲಯಕ್ಕೆ ಪೋದನೆಂಬುದುಂ ಪಾಱ್ವಸಿ[30] ಱಿೊಳ್ ಸಾಸವೆಯಂ ಕುಡಿದರಂತೆ ಮಱುಗಿ ಸುಂಟೆತಿಂದ ಬಾಯೊಳ್ ಬಿಸಿನೀರಂ ಕುಡಿದರಂತೆ ಮಿಡುಮಿಡುಮಿಡುಕಿ

ಮಗನಂ ನೆನೆನೆನೆದಿರುಳುಂ
ಪಗಲುಂ ಪಂಬಲಿಸಿ ಮಱುಗಿ ಕಳ್ವನ ತಾಯುಂ
ತಗಣಿತದುಃಖದಿನೊಳಗೊಳ
ಗೊಗೆದ ಮಹಾಶೋಕದಹನದಿಂ ಬೇಯುತ್ತುಂ ॥

ಪಣ್ಣಿಂಗಿಟ್ಟೊಡೆ[31] ಕಾಯುಬಿರ್ದುದೆಂಬ ನಾಣ್ಣುಡಿ ನುಡಿವವರ ಮಾತೆನಗಾದುದೆಂದು ಮೂಗಡ್ಮೆಯುತ್ತು[32] ಧನಕೀರ್ತಿಯಮೇಲೆ ತೀವ್ರಮಪ್ಪ ಮುನಿಸಾಗಿ [ಪೆಂಡತಿಯಪ್ಪ] ವಿಶಾಖೆಯಂ ಕರೆದು ಏಕಾಂತದೊಳ್ ಧನಕೀರ್ತಿಯ ಪ್ರಪಂಚಮೆಲ್ಲಮನ ಱಿಪಿ ವಿಷಪ್ರಯೋಗದಿಂದೊರ್ವರುಮಱಿಯದಂತಿಂದು ನಾಳಿ ನೊಳಗೆ ಕೊಲಲ್ವೇಡ್ಕೆಂದು ಪ್ರಾರ್ಥಿಸುವುದುಂ

ಸರಸಿಜಾಕ್ಷಿ ವಿಶಾಖೆ ಗಂಡನ ಮಾತನೇಳಿಸ†ಲಾಗದೆಂ †ತೆಗೆದುಹಾಕ
ದುರಗರಾಜಸಮಾನಭೋಗಿಯುನಿಂದು ಮಾಣದೆ ಕೊಲ್ವೆನೆಂ ಬಾರದು
ದಿರದೆ ದೂಡ್ಡಿದುವಪ್ಪ ಲಡ್ಡುಗೆಯಲ್ಲಿ ತೀವ್ರಪ ನಂಜನೋ
ಸರಿಸದಿಕ್ಕಿ ಮಗಳ್ಗೆ ನಿನ್ನ ವರಂಗೆ ನೀನನುರಾಗದಿಂ ॥

---

[30] ಬರಿಹೊಟ್ಟೆ. [31] ಹಣ್ಣಿಗೆ ಹೊಡೆದರೆ, [32] ಒಳಗೊಳಗೆ ಅತ್ತು.

ಇಕ್ಕುವುದೆಂದು ಪೇೞ್ದು ನೆರಮನೆಗೆ ಪೋಗಿರ್ಪುದುಂ ಶ್ರೀಮತಿಧನಕೀರ್ತಿಯ ಕಾಲಂ ಕರ್ಚಿ ವಿನಯದಿಂದೊಳಗಣ್ಗೆ ಕರೆದು ಪ್ರಿಯದಿಂದೇಱಲಿಕ್ಕಿ[33] ತಳಿಗೆಯಲಿಕ್ಕುವುದುಂ ಆ ಪ್ರಸ್ತಾವದೊಳ್

ಹಿಂಸಾವಿರಹಿತನ್ನೈ ನೀ
ನಿಂ ಸಲೆಬಾಳ್ ಪಾಪಕರ್ಮನೆಂ ಪೆಱರೞಿವಂ* *ನಾಶ
ಹಿಂಸೆಯನೆ ಬಯಸಿ ಮಱುಗುವ
ನಾಂ ಸತ್ತಪೆನೆಂದು ಪೂಣ್ದು§ ಬರ್ಪನ ತೆಱದಿಂ ॥ §ಪ್ರತಿಜ್ಞೆ ಮಾಡಿ

ಶ್ರೀದತ್ತಸೆಟ್ಟಿಯುಂ ಪಸಿದು ಬರ್ಪುದುಂ ಶ್ರೀಮತಿ ಕಾಲಂ ಕರ್ಚಿ ಒಳಗಣ್ಗೆ ಕರೆದು ವಿಷ್ಟರಮನಿಕ್ಕಿ ಪರಿಯಣ[34]ಮುಮನಿಟ್ಟು

ಪೊಡ್ಡಿದುವಾಗಿ ನುಣ್ಪೆಸೆವ ಶರ್ಕರೆಯೊಳ್ ಸಮನಪ್ಪ ಪೆಂಪಿನಾ
ಲಡ್ಡುಗೆಯುಂ ಮನೋಮುದದಿನೆನ್ನವರಂಗಳಿಪಿಂತೆ ಮುನ್ನಮಾಂ
ಬಡ್ಡಿಸಿದಂದು ನೋಡ ಪವೆದೀಗಳೆ ಡೊಂಬಿತಿ ಜೋಡೆ ಸೋಲದಿಂ
ಬಡ್ಡಿಸಿದಪ್ಪಳೆಂದು ನೆಱೆ ದೂಱುವರೆನ್ನನವಜ್ಞೆಯಿಂ ಪೆಱರ್ ॥

ಎಂದು ಕಿಱಿಯುವಪ್ಪ ಲಡ್ಡುಗೆಗಳಂ ಧನಕೀರ್ತಿಗಿಕ್ಕಿ ವಿಷದೊಳ್ ಪುದಿದಿರ್ದ ದೊಡ್ಡಿದುವಪ್ಪ ಲಡ್ಡುಗೆಗಳಂ ತಂದೆಗೆ ಬಡಿಸುವುದುಂ ಇರ್ವರುಂ ರುಚಿಕರಮಾದುದೆಂದು ಬಾಯ್ಸವಿಗೆ ಸೋಲ್ತು ಮೆಲ್ವುದುಂ ಶ್ರೀದತ್ತಂ ವಿಷಮಾವರಿಸಿ

ಪೆಱರೞಿವಂ ಬಯಸುವರೀ
ತೆಱದಿಂ ಮತಿಗೆಟ್ಟು ಸಾವರೆಂದೆಲ್ಲರ್ಗಂ
ನೆಱೆ ಸಾಱಿ ತೋಱಿ ಬೇಗದಿ
ನೆಱಿಪುವವೋಲ್ ಯಮಪುರಕ್ಕೆ ಸಂದಂ ಕುಟಿಲಂ ॥

---

[33] ಮಣೆಹಾಕಿ, [34] ತಟ್ಟೆ.

(ಅಂತುಸಾವುದುಂ) ಮನೆಯವರೆಲ್ಲಂ ಭೋರ್ಗರೆದೞುತುಂ ನೊಂದು ಬೆಂದು ಪೞವಿಸುತಿರ್ದರ್. ಅಂತವರ ಹಾಹಾಕ್ರಂದನಮಂ ವಿಶಾಖೆ ಕೇಳ್ದು ಧನಕೀರ್ತಿ ಸತ್ತನೆಂದು ಗಂಡನ ಸಾವನಱಿಯದೆ ರಾಗಿಸಿ ಪೆಟ್ಟುವೆರ್ಚಿ ಬಂದು ಒಳಗೆ ಪೊಕ್ಕು ಸತ್ತಿರ್ದ ಗಂಡನುಮಂ ಕೆಲದೊಳ್ ಕುಳ್ಳಿರ್ದಳಿಯನುಮಂ ಕಂಡು

ಆನೊಂದಂ ಬಗೆಯಲ್ ಬಿದಿ‡ ‡ವಿಧಿ
ತಾನೊಂದಂ ಬಗೆದು ವಾರ್ಧಿಗರ್ದಿಮದೆನ್ನಂ
ನೀನೞಿವೆಯೆಂದು ಮಾಡಿದೊ
ಡಾನೞಿವೆಂ ಮಗಳೆ ನಿನ್ನ ಪುಣ್ಯಂ ಕಿಱಿದೇ ||

ಎಂದು ಮಗಳ ಮೊಗಮಂ ನೋಡಿ ಪೞಯಿಸಿ ಮಾಯೆಯುಂ ಬಿಟ್ಟು ಶ್ರೀದತ್ತಂ ಮಾಡಿದ ಪೊಲ್ಲಮೆಯೆಲ್ಲಮನೊಂದು ಗುಂದದೆಲ್ಲರ್ಗಮಱಿಪಿ ಪಲರುಂ ಬೇಡವೇಡೆನೆ ವಿಷಪೂರಿತಮಪ್ಪ ಲಡ್ಡುಗೆಗಳಂ ತಿಂದು ವಿಶಾಖೆಯುಂ ಸಾವುದುಂ

ಪುರಜನಮುಂ ಬಾಂಧವರುಂ
ತರಳಾಕ್ಷಿಯ ವಚನದಿಂದವಱಿದಾತನ ನಿ
ಷ್ಕರುಣತೆಗೆ ನಾಡೆಯುಂ ಕೊ
ಕ್ಕರಿಸಿ ಮನಂ ನೊಂದು ಮಱುಗಿ ಚೋದ್ಯಂಬಟ್ಟರ್ ||

ಪಿರಿದಪ್ಪಾಪತ್ತಂ ಪರಿ
ಹರಿಸಿ ಮಹಾಪುಣ್ಯಮೂರ್ತಿ ಕೀರ್ತಿನಿಧಾನಂ
ಪರಮಾರ್ಥಂ ಬದುಕಿದನು
ರ್ವರೆಯೊಳಿದಾಶ್ಚರ್ಯಮೆಂದು ಕೈಮುಗಿದು ಜನಂ ||

ಒಂದೆ ಕೊರಲೊಳ್ ಪೊಗೞುತ್ತುಮಿರೆ ಆದಂ ವಿಶ್ವಂಧರ ಮಹಾರಾಜಂ ಕೇಳ್ದು

ಜಿನಸಮಯವರ್ಧನಂ ಗಡ
ಮನವರತಂ ಭವ್ಯಜನವಿನೋದಂ ಗಡಮಾ
ತನನಿಂದು ನೋೞ್ಪೆಮೆಂದಿಂ
ತನುಪಮಗುಣನಿಳಯನಟ್ಕಱಿಂ ನಲಿಯುತ್ತುಂ ॥

ಧನಕೀರ್ತಿ ಕುಮಾರನರಮನೆಗೆ ಮಹಾವಿಭೂತಿಯಿಂ ಬಂದು ವಾತ್ಸಲ್ಯರತ್ನಾಕರನಂ ನೋಡಿ ಮೆಚ್ಚಿ

ಈ ತೇಜಮುಮೀರೂಪುಂ
ಮಾತೇನಿಂತಪ್ಪ ವಿನಯಮುಂ ಗುಣಮುಂ ವಿ
ಖ್ಯಾತಿಯುಮೀತನನಿನಿತುಂ
ಭೂತಳಪತಿ ಮಾೞ್ಪ§ದೊಂದಚ್ಚರಿಯೇ? ॥ §ಮಾಡುವುದು

ಎಂದು ತನ್ನೊಳೆ ನುಡಿದು ವಿಶ್ವಾವತಿಕನ್ನೆಯುಮನರ್ಧರಾಜ್ಯಮುಮಂ ಕುಡಲೆಂದಿರ್ಪುದುಂ ಗುಣಪಾಲಸೆಟ್ಟಿಯಿರ್ದಂ ಕೌಶಾಂಬಿಯೊಳ್ ಎಂದೊರ್ವಂ ಬಿನ್ನವಿಪುದುಂ ಸೆಟ್ಟಿಯಂ ಬರಿಸಿ ಮುನ್ನಿನ ಪದವಿಯಂ ಕೊಟ್ಟು ಧನಕೀರ್ತಿಗೆನ್ನ ಮಗಳಂ ಪ್ರಾಣವಲ್ಲಭೆ ಮಾಡೆಂದು ಸೆಟ್ಟಿಯ ಮನದ ಸಂಶಯಂ ಪಿಂಗೆ ನುಡಿದೊಡಂಬಡಿಸಿ ಶುಭದಿನಮಂ ಬೆಸಗೊಂಡು

ಧನಕೀರ್ತಿ ಕುಮಾರಂಗಂ
ತನೂಜೆಗಂ ಮನದೊಳೊಸೆದು ಪರಮೋತ್ಸವದಿಂ
ಜಿನಗಂಧೋದಕದಿಂದಂ
ಜನಾಧಿಪಂ ತಾನೆ ಬಂದು ಕೈನೀರೆಱೆದಂ‡ ॥ ‡ಧಾರೆಎರೆದನು

ಅಂತು ಕೈನೀರೆಱೆದು ಕ್ಷೀರೋದಕನ್ಯಾಯದಿಂದೊಡಗೂಡಿರ್ಪನ್ನೆಗಂ ಯಶೋಧರರೆಂಬೇಕವಿಹಾರಿಗಳ್ ಉಜ್ಜಯಿನಿಗೆ ವಂದಿರ್ಪುದುಂ ಅಱಿಸುವ ಬಳ್ಳಿ ಕಾಲೊಳ್ ತೊಡರ್ದುದೆಂಬಂತೆ

ಸುವ್ರತಾರೂಢರಾಗಲೆಂದಿರ್ದೆಮಗೆ ಮಹಾಪುರುಷರ್ ಭಾಗ್ಯದಿಂದಿದಿರ್ವಂದರೆಂದು ವಿಶ್ವಂಧರಮಹಾರಾಜಂ ಯೋಗೀಂದ್ರವಂದ್ಯಪಾದನನರ್ಚಿಸಿ ಬಂದಿಸಿ ಆಪ್ತಾಗಮ ಪದಾರ್ಥಂಗಳಂ ಕೇಳ್ದಿರ್ಪುದುಂ ಗುಣಪಾಲಸೆಟ್ಟಿ ಧನಕೀರ್ತಿಗೆ ಶ್ರೀದತ್ತಸೆಟ್ಟಿ ಮಾಡಿದ್ದೈದುಂ ಕಂಟಕಂಗಳುಂ ತಪ್ಪಿ ರಾಜ್ಯಮಾದುದಾವ ಭವದ ಪುಣ್ಯದ ಫಲಮೆಂದು ಬೆಸಗೊಳ್ವುದುಂ ದುರಿತೇಂಧನದಹನನಱಿದು ಪೇೞ್ದಂ

ಮುನಿಪತಿ ಪೇೞೆ ಕೇಳ್ದು ಗುಣಪಾಲವಣಿಗ್ವರನುಂ ಮಹೀಶನುಂ
ವನರುಹನೇತ್ರೆಯುಂ ಸಕಲ ಭೂಭುಜರುಂ ಧನಕೀರ್ತಿ ಭೂಮಿಪಾ
ಲನು ಮೃಗಸೇನೆಯುಂ ಮನದೊಳಚ್ಚರಿವಟ್ಟು ಜಿನೇಂದ್ರಧರ್ಮಮಂ
ಜನನುತಮಂ ಕರಂ ಪಡೆದು ನಂಬಿದವರ್ಗೆಡರುಂಟೆ ಲೋಕದೊಳ್

ಎಂದು ತಮ್ಮೊಳ್ ನುಡಿದು ದಂಟನೂದುವಂಗೆ ಕೊೞಲ್ ದೊರೆಕೊಂಡುದೆಂಬಂತೆ ಕೋಣನನೇಱುವಂಗೆ ಮದಕರಿ ದೊರೆಕೊಂಡಂತೆ ಪುಲ್ಗುಡಿಸಲೊಳಿರ್ಪಂಗೆ ಮಣಿಮಾಡ[35]ಮಾದಂತೆ ಮುನ್ನಮೆ ಬ್ರತಮಂ[36] ಕೊಳಲೆಂದಿರ್ದವರಹಿಂಸಾವ್ರತದ ಪ್ರತ್ಯಕ್ಷ ಫಲಮಂ ಕಂಡು ವಿಶ್ವಂಧರಮಹಾರಾಜನುಂ ಗುಣಪಾಲಸೆಟ್ಟಿಯುಂ ಧನಶ್ರೀಯುಂ ಜಿನದೀಕ್ಷೆಗೊಂಡರ್. ಧನಕೀರ್ತಿಕುಮಾರನುಂ ಪಲಕಾಲಂ ರಾಜ್ಯಂಗೆಯ್ಯುತ್ತುಮಿರ್ದು ಕೆನ್ನೆಯ ನರೆಯಂ ಕಂಡು ಸಂಸಾರಕ್ಕೆ ಪೇಸಿ ಸಂನ್ಯಸನ ವಿಧಿಯಿಂ ಮುಡಿಪಿ ಅಹಮಿಂದ್ರನಾಗಿ ಪುಟ್ಟಿದಂ. ಶ್ರೀಮತಿಯುಂ ವಿನಯಮತಿಯರೆಂಬ ಕಂತಿಯರಲ್ಲಿ ದೀಕ್ಷೆಯಂ ಕೊಂಡು ಮುಡಿಪಿದೇವಲೋಕದೊಳ್ ಪುಟ್ಟಿದಳ್. ವಿಶ್ವಂಧರ ಮುನಿಕುಂಜರನುಂ,

---

[35] ಅರಮನೆ, [36] ವ್ರತ.

ಗುಣಪಾಲಮುನಿಯುಂ ಧನಶ್ರೀಯುಂ ಮುಡಿಪಿ ದೇವಲೋಕ ದೊಳ್ ಪುಟ್ಟಿದರದುಕಾರಣದಿಂ

ಕೊಲೆಯಂ ಬಿಟ್ಟ ಮಹಾತ್ಮಂ
ಸುಲಲಿತ ಕೈವಲ್ಯ ಕಾಮಿನೀಶ್ವರನಕ್ಕುಂ
ಪಲವುಂ ಮಾತಿನೊಳೇನೊ
ಳ್ಗಲಿಯಾಗಿ ಸಮಸ್ತ ಧಾತ್ರಿಯುಂ ತಾನಾಳ್ಗುಂ ॥

ಈ ಕಥೆಯನ್ನು ಓದಿದ ಮೇಲೆ ನಮ್ಮ ಜನದಲ್ಲಿ ಹೆಚ್ಚು ಬಳಕೆಯಲ್ಲಿರುವ ಚಂದ್ರಹಾಸನ ಕಥೆಯು ಜ್ಞಾಪಕಕ್ಕೆ ಬರದೆ ಇರುವುದಿಲ್ಲ. ಪ್ರಾಚೀನ ಜನಾಂಗಗಳಲ್ಲಿ ಈ ಕಥೆಯು ಬಹಳ ಪ್ರಚಾರದಲ್ಲಿದ್ದಂತೆ ಕಂಡುಬರುತ್ತದೆ. ತನ್ನ ಕೊಲೆಗಾಗಿ ಒಂದು ಪತ್ರವನ್ನು ತರುತ್ತಿರುವ ರಾಜಕುಮಾರನು ಆಯಾಸದಿಂದ ಮಲಗಿದ್ದಾಗ ರಾಜಕುಮಾರಿಯೊಬ್ಬಳು ಬಂದು ಆ ಪತ್ರವನ್ನು ಬದಲಾಯಿಸಿ ಆತನನ್ನು ಮದುವೆಯಾಗುವ ಈ ಸನ್ನಿವೇಶವು ಪ್ರಪಂಚದ ಅನೇಕ ಜನಾಂಗಗಳ ಕಥೆಗಳಲ್ಲಿ ಕಂಡುಬರುತ್ತದೆ. ಇದು ಬಹಳ ಪುರಾತನವಾದ ಕಥಾವಸ್ತು. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೂಪಗಳನ್ನು ಪಡೆದಿದೆ ಅಷ್ಟೆ. ಗ್ರೀಕ್ ಮತ್ತು ರೋಮನ್ ಜನರ ಕಥಾಕೋಶದಲ್ಲಿ ಇದಕ್ಕೆ ಸಾಮ್ಯಗಳು ಕಂಡುಬರುತ್ತವೆ.* ಇಷ್ಟು ವಿಶಾಲ ವ್ಯಾಪ್ತಿಯುಳ್ಳ ಕಥೆ ಜೈನರ ಮನಸ್ಸನ್ನು ಸೆಳೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ನಯಸೇನನು ಈ ಕಥೆಯಲ್ಲಿ ವ್ಯತ್ಯಾಸಮಾಡಿಕೊಂಡರೂ ಆದರ ತಿರುಳನ್ನು ಉಳಿಸಿಕೊಂಡಿದ್ದಾನೆ. ಶ್ರೀ ದತ್ತನ ಪಾತ್ರರಚನೆ

* ಸಂಭಾವನೆ. ಚಂದ್ರಹಾಸನ ಕಥೆಯ ಪ್ರಸಾರ. ಕೆ. ವೆಂಕಟರಾಮಪ್ಪ, ಎಂ.ಎ. ಅವರ ಲೇಖನವನ್ನು ನೋಡಿ.

ಯನ್ನು ಚೆನ್ನಾಗಿ ಮಾಡಿದ್ದಾನೆ. ಮಗು ಹುಟ್ಟಿದೊಡನೆಯೇ ಹುಟ್ಟಿದ ಅವ್ಯಾಜದ್ವೇಷ ಕ್ರಮೇಣ ಬೆಳೆದು ಮಗಳ ಸೌಮಂಗಲ್ಯವನ್ನೂ ಅವನು ಹೇಗೆ ನಿರ್ಲಕ್ಷಿಸಿದನು ಎನ್ನುವುದು ಮನದಟ್ಟುವಂತೆ ಚಿತ್ರಿತವಾಗಿದೆ. ಕೊನೆಗೆ ತನ್ನ ತಪ್ಪಿನಿಂದ ತಾನೇ ಸತ್ತನು. ಇಂತಹ ತಪ್ಪುಮಾಡುವವರೆಲ್ಲರೂ ಹೀಗೆಯೇ ಸಾಯುತ್ತಾರೆನ್ನುವುದನ್ನು ತೋರಿಸುವಂತೆ ಸತ್ತನಂತೆ!

ಆದರೆ ಈ ಕಥೆಯ ಮೇಲೆ ಒಂದು ಆಕ್ಷೇಪಣೆಯನ್ನು ಎತ್ತಬಹುದು. ಶ್ರೀದತ್ತನು ಚಂದ್ರಹಾಸನ ಕಥೆಯ ದುಷ್ಟಬುದ್ಧಿಗೆ ಯಾವ ವಿಧದಲ್ಲಿಯೂ ಸಮನಾಗಲಾರನು; ಈ ಕಥೆಯಲ್ಲಿ ಮಗುವಿನ ಮೇಲೆ ದ್ವೇಷ ಬೆಳೆಯುವುದಕ್ಕೆ ತಕ್ಕಷ್ಟು ಕಾರಣವೇ ಇಲ್ಲ, ಎಂಬುದು ಆ ಆಕ್ಷೇಪಣೆ. ಕಥೆಯಲ್ಲಿ ದ್ವೇಷಕ್ಕೆ ಕಾರಣ ಸಾಲದೆನ್ನುವುದನ್ನು ಕಂಡು ಆಮೇಲೆ ಬರೆದ ಚಂದ್ರಹಾಸನ ಕಥೆಯಲ್ಲಿ ಕವಿಗಳು ದುಷ್ಟಬುದ್ಧಿಗೆ ರಾಜ್ಯದಾಸೆಯನ್ನು ಅಂಟಿಸಿದರು. ಆದರೆ ಈ ಕಥೆಯಲ್ಲಿಯೂ ದ್ವೇಷವು ಸಂಪೂರ್ಣವಾಗಿ ಅವ್ಯಾಜವೇ ಅಲ್ಲ. ಶ್ರೀದತ್ತನ ಈ ವೈರಕ್ಕೆ ಹಿಂದಿನ ಜನ್ಮಾಂತರಗಳಲ್ಲಿ ಬೆಳೆದಿರಬಹುದಾದ ವೈಷಮ್ಯ ಕಾರಣ. ಆ ದೃಷ್ಟಿಯಿಂದ ನೋಡಿದರೆ ಶ್ರೀದತ್ತನ ಕಾರ್ಯಕ್ಕೆ ಸಮಾಧಾನ ಹೇಳುವುದು ಕಷ್ಟವಾಗುವುದಿಲ್ಲ.

ನಯಸೇನನ ಕಥನಕ್ರಮ ಈ ಕಥೆಯಲ್ಲಿ ಸೊಗಸಾಗಿ ವ್ಯಕ್ತವಾಗುತ್ತದೆ. ಅವನ ಸುಲಭಪದಪ್ರಯೋಗ, ಕಥೆಯಲ್ಲಿನ ಸನ್ನಿವೇಶಗಳ ವೇಗವಾದ ಪ್ರವಾಹ, ಪಾತ್ರರಚನಾಕೌಶಲ ಇವೆಲ್ಲವೂ ಇಲ್ಲಿ ಸಮ್ಮಿಳಿತವಾಗಿವೆ. ನಯಸೇನನ ಕಾವ್ಯಕೌಶಲಕ್ಕೆ ಈ ಕಥೆಯನ್ನು ಎತ್ತಿತೋರಿಸಬಹುದು.

೬. ಕೆಲವು ನೀತಿಕಥೆಗಳು

ಸತ್ಯವ್ರತದ ಕಥೆಯನ್ನು ಹೇಳುವಾಗ ನಯಸೇನನು ಒಂದು ಹೊಸರೀತಿಯನ್ನು ಅನುಸರಿಸಿದ್ದಾನೆ. ಆ ಕಥೆಯಲ್ಲಿ ಒಬ್ಬ ಸೆಟ್ಟಿ ಜೈನಸಂನ್ಯಾಸಿಯೊಬ್ಬನನ್ನು ತನ್ನ ಮನೆಗೆ ಕರೆದು ಕೆಲವು ದಿನಗಳವರೆಗೆ ಶುಶ್ರೂಷೆಮಾಡುತ್ತಾನೆ. ಸಂನ್ಯಾಸಿಯನ್ನು ಕಳುಹಿಸುವ ದಿನ ಸೆಟ್ಟಿಯ ಮಗನು ತಂದೆಯ ಪೆಟ್ಟಿಗೆಯಿಂದ ಸ್ವಲ್ಪ ಚಿನ್ನವನ್ನು ಕದ್ದು ಮುಚ್ಚಿಟ್ಟಿರುತ್ತಾನೆ. ಸೆಟ್ಟಿಯು ಸಂನ್ಯಾಸಿಯೇ ಕದ್ದಿದ್ದಾನೆಂದು ಅವನ ಮೇಲಿನ ಸಂಶಯದಿಂದ ಅವನನ್ನು ಪುನಃ ಮನೆಗೆ ಕರೆದು ಒಂದು ಕಥೆಯನ್ನು ಹೇಳುತ್ತಾನೆ. ಸಂನ್ಯಾಸಿಗೆ ಈ ವಿಷಯವು ಗೊತ್ತಾಗುತ್ತದೆ. ತಾನು ಕಳ್ಳನಲ್ಲವೆಂಬುದನ್ನು ತೋರಿಸುವುದಕ್ಕೆ ಅವನು ಮತ್ತೊಂದು ಕಥೆ ಹೇಳುತ್ತಾನೆ. ಹೀಗೆ ಒಬ್ಬರಾದ ಮೇಲೊಬ್ಬರು ಅನೇಕ ಕಥೆಗಳನ್ನು ಹೇಳುತ್ತಾರೆ. ಕೊನೆಗೆ ಸೆಟ್ಟಿಯ ಮಗನಿಗೆ ವೈರಾಗ್ಯ ಹುಟ್ಟಿ ಚಿನ್ನವನ್ನು ತಂದೆಯೆದುರಿಗೆ ಎಸೆದು ತಾನು ಜೈನದೀಕ್ಷೆಯನ್ನು ವಹಿಸುತ್ತಾನೆ. ಈ ಕಥೆಯಲ್ಲಿ ಸೆಟ್ಟಿಯೂ ಸಂನ್ಯಾಸಿಯೂ ತಾವು ಏನು ಹೇಳುತ್ತಿರುವರೆಂಬುದು ಇಬ್ಬರಿಗೂ ಗೊತ್ತಿದ್ದರೂ ಅದನ್ನು ಬಾಯಿಬಿಟ್ಟು ಹೇಳದೆ ಕಥೆಗಳ ಮೂಲಕ ಹೇಳುವುದರಲ್ಲಿ ಒಂದು ಸೊಗಸಿದೆ. ಕಥೆಯ ಸ್ವಾರಸ್ಯ ಕೊನೆಯತನಕ ಉಳಿಯುತ್ತದೆ.

ಈ ಮುಖ್ಯ ಕಥೆಯ ಒಳಗೆ ಸೇರಿರುವ ಅನೇಕ ಸಣ್ಣ ಸಣ್ಣ ಕಥೆಗಳಲ್ಲಿಯೂ ಒಂದು ಬಗೆಯ ಸ್ವಾರಸ್ಯವಿದೆ. ಉದಾಹರಣೆಗಾಗಿ ಎರಡು ಕಥೆಗಳನ್ನು ಮುಂದೆ ಕೊಟ್ಟಿದೆ.

ಸೆಟ್ಟಿ ಹೇಳಿದ ಒಂದು ಕಥೆ :—

ಭಾರತಿಯೆಂಬೊಂದು ನದೀ
ತೀರದೊಳೊರ್ವಂ ಕಾಪಾಲಿಯೆಂಬಂ ಗೊರವಂ
ಧೀರಂ ತಾಪಸತಪಸಿನೊ
ಳಾರಿಂದಂ ಕರಮೆ ಪಿರಿಯನೆಂದೊಸೆದಿರ್ದಂ ॥

ಅಂತಿರ್ಪುದುಮೊಂದು ದಿನಂ ಸಂತತಂ ಮೞೆಕಱೆವುದುಂ ಗಿರಿಯ ಕಾಂತಾರದ[37] ಪೆರ್ವೊನಲೆಲ್ಲಂ ಒಂದಾಗಿ ವಾರಾಶಿ[38] ಮೇರೆದಪ್ಪಿದುದೆಂಬಂದದೊಳೆ ಪೊಲನುಂ ನೆಲನುಂ ಜಲಪ್ರಳಯಮಾಗೆ ಬಂದ ತೊಱೆಯೊಳೊಂದಾನೆಯ ಮಱಿ ಬಿರ್ದು ಮತ್ತಿಯ ಪೆರ್ಮರನಂ ಪಿಡಿದು ಮರನುಂ ತಾನುಂ ಬರುತ್ತಿರ್ಪುದಂ ಕಾಪಾಲಿ ಭಿಕ್ಷುಕಂ ಕಂಡು, ತೊಱೆಯಂ ಪಾಯ್ದು ಮಾತಂಗಕಳಭಮಂ[39] ಪಿಡಿದು ಮರಂ ಬೆರಸು ತಡಿಗೆ ತಂದು ಮರನಂ ಪೋಗೆಬಿಟ್ಟು, ತತ್ಕರಿಯಂ ಪೊಱಗಣ್ಗೆ ನೋಯಲೀಯದೆ ತೆಗೆದು ತದ್ಗಜದ ಭಯಮಂ ಪಿಂಗಿಸಿ ತನ್ನ ಮಠಕ್ಕೆ ತಂದು

ಪುಳಿಗೂೞಂ ತದಿಕಿನ* ಕೆಂ
ದಳಿರಂ ಫಾಲ್ಗನೆಯನೆಳೆಯ ಪುಲ್ಲಂ ಕಬ್ಬಂ ।
ಬಲವಂತನಕ್ಕುಮೆಂದು
ಜ್ವಲಚಿತ್ತಂ ತಂದು ಪೊರೆವುದುಂ ಗಜಶಿಶುವಂ ॥

*ಆನೆಬೇಲ

ಕರಿಪತಿ ಬೆಳೆದು ಸುರೇಶನ
ಕರಿಗಂ ಮಿಗಿಲೆನಿಸಿ ಮಠದೊಳಿರೆ ಪಿಸುಣರ್§ ತ
ತ್ಕರಿಯಿರ್ದುದನೊಯ್ಯನೆ ತ
ಮ್ಮರಸಂಗಱಿಪುವುದುಮರಸನಱಿದಾ ಕರಿಯಂ ॥

§ಚಾಡಿಕೋರರು

[37] ಕಾಡು, [38] ಸಮುದ್ರ, [39] ಆನೆಯ ಮರಿಯನ್ನು.

ಬೇಡಿ ಕಾಪಾಲಿಯಲ್ಲಿಗಟ್ಟುವುದುಂ ಕಾಪಾಲಿ ರಾಜಭೃತ್ಯರ ದೆಸೆಯಿಂದೆ ತತ್ಪ್ರಪಂಚಮೆಲ್ಲಮನಱಿದು ಆನೆಯನೊಪ್ಪಿಸುವುದುಂ,

ಅರಮನೆಯೊಳಗಿರಲಾಱದೆ
ಕರಿ ಸಿಡಿಮಿಡಿಗೊಂಡು ನೆನೆದು ಮುನ್ನಿನ ನೆಲೆಯಂ
ಪರಿಹರಿಸಿ ಕಾಪಿನವರಂ
ಪರಿತಂದುದು ಮಠಕೆ ಮನದ ಮೋಹದಿನಾಗಳ್ ||

ಧರಣೀನಾಥಂ ತನಗಾಗಜದಮೇಲೆ ಮೋಹಮುಂಟಪ್ಪುದಱಿಂ ಮಗುೞೆ ತರಿಸಿ ಮುನ್ನಿನೆಡೆಯೊಳ್ ಕಟ್ಟಿಸುವುದುಂ ಮತ್ತಂ ನಿಲಲಾಱದೆ ಮಠವೆ ಗುಱಿಯಾಗಿ ಪೋಪುದುಂ, ಮಹೀನಾಥಂ ಪಲವುಂ ಸೂೞ್ತ[40]ರಿಸಿ ಬೇಸತ್ತು ಕಾಪಾಲಿಗೆ ತಾನೆನ್ನ ದೇಶದಿಂ ಪೊಱಮಟ್ಟು ಪೋಪುದೆಂದಟ್ಟುವುದುಂ ಕಾಪಾಲಿ ಭಯಸ್ಥನಾಗಿ ಆನೆಯನರಮನೆಗೆ ತಂದೊಪ್ಪಿಸಿರ್ಪುದುಂ, ಅರಸಂ ನಾಲ್ಕಡಿ ಪೋಗವೇೞ್ದೊಡೆ ಭಯಂಗೊಂಡೆನ್ನನರಸಂ ಗೊಪ್ಪಿಸಿ ಪೋದಂ ಕೊಲ್ಲದೆ ಮಾಣನೆಂದು

ಧರೆಯಂ ಮೆಟ್ಟಿ ಪಲಂಬರುಂ ದಯೆಯನೊಕ್ಕಾನಂದದಿಂದೀಕ್ಷಿಸು
ತ್ತಿರೆ ಕಾಪಾಲಿಮಹೀನುತಂ ಕರುಣದಿಂ ಪೊಕ್ಕೆನ್ನನಂದೆಯ್ದೆ ವಿ
ಸ್ತರದಿಂ ರಕ್ಷಿಸಿ ಕಾದನೆನ್ನದೆ ಗಜೇಂದ್ರಂ ಕೋಪದಿಂ ಬಂದು ನ
ಟ್ಟಿರುಳೊಳ್ ಕೊಂದುದು ಬೌದ್ಧನಂ ಧರಣಿಯೊಳ್
ನಿರ್ಧರ್ಮರೇಗೆಯ್ಯರೋ ?

ಮುನಿ ಹೇಳಿದ ಒಂದು ಕಥೆ—

ದಂತಿಪುರಮೆಂಬ ಪೊೞಲೊಳ್
ಕಂತುವಿನರಲಂಬೆ‡ ಪೆಣ್ಣ ರೂಪಾಯ್ತೆನ್ನಂ [‡ಮನ್ಮಥನ ಹೂಬಾಣ

40 ಅನೇಕಸಲ

ಬಾತೆಸೆವ ಚೆಲ್ವೆಯೊರ್ವಳ
ನಾತಶ್ರೀಯೆಂಬ ಸೂಳೆ ಸುಖದಿಂದಿರ್ಪಳ್ ॥

ಆಕೆಯ ಕೆಳದಿ ವಾಸವದತ್ತೆಯೆಂಬಳ್ ಅನಂತಶ್ರೀಗೊಂದು ಗಿಳಿಯಂ ಮಾಱುಗೊಂಡು ಕೂರ್ಮೆಯಿಂ ತಂದು ಕುಡುವುದುಂ ಗಿಳಿಯ ಚೆಲ್ವಿಂಗೆ ನಾಡೆಯುಂ ಮನದೊಳ್ ಸೋಲ್ತು ಪೊನ್ನ ಪಂಜರದೊಳ್ ಗಿಳಿಯನಿರಿಸಿ ನಾನಾಪ್ರಕಾರದ ಸೂಳೆಮಾತುಗಳಂ ಶೃಂಗಾರವೃತ್ತಂಗಳುಮಂ ಕಲಿಸುತ್ತಂ ವಿನೋದವಾಗಿ ಪಲವು ದಿವಸಂ ಪೋಗೆ ಅವಳ ಸೌಭಾಗ್ಯದ ಪೆಂಪೆಂಬ ಪೆಸರೊಳಡಕೆಯ ಭಾಗದ ಭಾಗಮಿಲ್ಲೆಂದು

ಪುರದೊಳಗಣ ಸೂಳೆಯರೆ
ಲ್ಲರುಮಾಕೆಗೆ ಕೊಲ್ವ ಬಗೆಯಂ ತಂದಾ
ದರದಿಂ ವಾಸವದತ್ತೆಯ
ನೆರಡಿಲ್ಲದೆ ತಮಗೆ ಮಾಡಿಕೊಂಡನುನಯದಿಂ ॥

ಮೆಲ್ಲನೆ ವಾಸವದತ್ತೆಗೆ
ಕೊಲ್ಲಾಕೆಯನೆಂದು ಕೊಟ್ಟು ಪಲವುಂ ಪೊನ್ನಂ
ಕಳ್ಳೊಳಗೆ† ಕಾಳಕೂಟಮ †ವಿಷದಲ್ಲಿ
ನೆಲ್ಲರುಮೊಂದಾಗಿ ಕೂಡಿ ಕುಡುವುದುಮಾಗಳ್ ॥

ವಾಸವದತ್ತೆ ಪೊನ್ನ ಮೋಹದಿಂ ಕಳ್ಳಂ ಕೊಂಡುಬಂದು ಅನಂತಶ್ರೀಗೆ ಕುಡುವುದುಂ ;

ಇಲಿರಿಸಿ ಪೋಗು ಕಳ್ಳಂ
ಮೆಲ್ಲನೆ ಬಯ್ಗಿಂಗೆ ಕುಡಿವಮಿರ್ವರು ನೀನಿಂ
ತಿಲ್ಲಿಗೆ ಬಾ ಯೆಂದಾಕೆಗೆ
ಸಲ್ಲಲಿತಾಂಗಿ ಮೆಚ್ಚಗೊಟ್ಟಾದರದಿಂ ॥

ಮನ್ನಿಸುವುದುಮಾಕೆಯುಂ ಕಳ್ಳಂ ಮಂಚದ ಕೆಳಗಿರಿಸಿ ತನ್ನ ಮನೆಗೆ ಪೋದಳ್. ಇತ್ತಲನಂತಶ್ರೀಯುಂ ಪಾಸಿನ ಮೇಲೆ ಪಟ್ಟಿರ್ದಳ್. ಅನ್ನೆಗಂ ಪಂಜರದೊಳಿರ್ದ ಗಿಳಿ ಕಳ್ಳ ಗಂಧಕ್ಕೆ ಮೊಗಸಿದ ನೊಣಂಗಳೆಲ್ಲಂ ಸಾವುದಂ ಕಂಡು ವಿಷಮೆಂ ದಱಿದು ಈ ಕಳ್ಳಂ ಕುಡಿದಳಪ್ಪೊಡೆ ಅನಂತಶ್ರೀ ಸಾಗು ಮೆಂದು ಬಟ್ಟಲಂ ನೆಲಕ್ಕುಗುವದುಂ,[41] ಅನಂತಶ್ರೀ ಮುಳಿದು ಆ ಗಿಳಿಯಂ ಕೊಂದು, ಕಳ್ಗೆಱಗಿ ಸಾವ ಮಾಕ್ಷಿಕತತಿಯಂ[42] ಕಂಡು, ಈ ಗಿಳಿಯಿಂದೊರ್ಮೆಗೆ ಬರ್ದುಕಿದೆನ್, ಎನಗುಪ ಕಾರಂಮಾಡಿದ ಗಿಳಿಯಂ ವಿಚಾರಿಸದೆ ಕೊಂದೆನ್ ಎಂದು ಗಿಳಿಯುಪೆಣನಂ ತನ್ನೆರ್ದೆಯ ಮೇಲಿಕ್ಕಿ ಕೊಂಡಟ್ಟಳ್.

ಸತ್ಯವ್ರತದ ಕಥೆಯಲ್ಲಿ ಇಂತಹ ಪ್ರಾಣಿಗಳ ಮತ್ತು ಪಕ್ಷಿ ಗಳ ಕಥೆಗಳು ಅನೇಕವಿವೆ. ಇವುಗಳನ್ನು ಸಾಮಾನ್ಯವಾಗಿ ಇಂಗ್ಲಿಷಿನಲ್ಲಿ 'ಫೇಬಲ್' ಎಂದು ಕರೆಯುತ್ತಾರೆ. ನಾವು ಇವುಗಳನ್ನು ಚಿಕ್ಕ ನೀತಿಕಥೆಗಳು ಎಂದು ಹೇಳಬಹುದು. ಇಂತಹ ಕಥೆಗಳು ನಮ್ಮಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಇವೆ. ಪಂಚತಂತ್ರ ಹಿತೋಪದೇಶಗಳಲ್ಲಿ ಅನೇಕ ನೀತಿಕಥೆ ಗಳಿವೆ. ಗ್ರೀಸ್ ದೇಶದಲ್ಲಿ ಸುಮಾರು ಕ್ರಿ.ಪೂ. ೫ನೆಯ ಶತ ಮಾನದಲ್ಲಿ ಈಸೋಫ್ ಎಂಬವನು ಅನೇಕ ನೀತಿಕಥೆಗಳನ್ನು ಬರೆದನು. ಎಲ್ಲ ದೇಶಗಳಲ್ಲಿಯೂ ಅವರವರ ನೀತಿಕಥೆಗಳು ಬೆಳದಿವೆ. ಆದರೆ ಪ್ರಾಚೀನತೆಯಲ್ಲಿ ಗ್ರೀಸ್ ಮತ್ತು ಇಂಡಿಯಾ ದೇಶಗಳು ಮೊದಲನೆಯ ಸ್ಥಾನವನ್ನು ಆಕ್ರಮಿಸುತ್ತವೆ.

ಈ ಕಥೆಗಳನ್ನು ಮುಖ್ಯ ಕಥೆಯೊಂದಿಗೆ ಹೊಂದಿಸಿ ಹೇಳಿ ರುವುದರಲ್ಲಿ ನಯಸೇನನ ಆಶಯ ಸುಲಭ ವೇದ್ಯವಾಗಿದೆ.

---

41 ಚೆಲ್ಲಿ, 42 ನೊಣದಗುಂಪು.

ಸತ್ಯವ್ರತದ ಮಹಿಮೆಯನ್ನು ಸಾರುವುದರ ಜೊತೆಗೆ ಕೆಲವು ನೀತಿಗಳನ್ನು ತಿಳಿಸುವುದಕ್ಕೆ ಪ್ರಯತ್ನಪಟ್ಟಿದ್ದಾನೆ. ಈ ಕಥೆಯನ್ನು ಹೇಳಿರುವ ರೀತಿಯಲ್ಲಿ ಒಂದು ನೂತನತೆ ಇದೆ.

---

೭. ಧರ್ಮಾಮೃತದಲ್ಲಿ ಪರಮತವಿಡಂಬನ

ಒಬ್ಬ ವ್ಯಕ್ತಿಯಲ್ಲೋ ಸಮಾಜದಲ್ಲೋ ಕಾಣಬರುವ ಕುಂದನ್ನು ಎತ್ತಿ ತೋರಿಸಿ ಹಾಸ್ಯಮಾಡುವುದೇ ವಿಡಂಬನ. ಜೈನಧರ್ಮವನ್ನು ಪ್ರಚಾರಮಾಡಲು ಹೊರಟ ನಯಸೇನನಿಗೆ ಇತರ ಮತಗಳನ್ನು ವಿಡಂಬನಮಾಡುವುದು ಆವಶ್ಯಕವಾಯಿತು. ಧರ್ಮಾಮೃತದ ಕಥೆಗಳನ್ನು ಪರಿಶೀಲಿಸಿದರೆ ಅವುಗಳಲ್ಲೆಲ್ಲಾ ಒಬ್ಬ ಬ್ರಾಹ್ಮಣನೋ ಬೌದ್ಧನೋ ಜೈನಮುನಿಗಳ ಧರ್ಮೋಪದೇಶವನ್ನು ಕೇಳಿ ತಮ್ಮ ಮತಗಳಿಗಿಂತ ಜೈನಧರ್ಮವೇ ಶ್ರೇಷ್ಠವಾದುದೆಂದು ನಂಬಿ ಆ ಮತಕ್ಕೆ ಸೇರುವುದು ವ್ಯಕ್ತವಾಗುತ್ತದೆ. ಇದರಿಂದ ಎರಡು ವಿಷಯಗಳು ಸಾಧಿತವಾದ ಹಾಗಾಗುತ್ತದೆ. ಪರಮತಖಂಡನೆಯೂ ಸ್ವಮತಪ್ರಸಾರಣವೂ ಒಟ್ಟಿಗೆ ನಡೆದಂತಾಗುತ್ತದೆ. ಇಂತಹ ಸನ್ನಿವೇಶಗಳು ಧರ್ಮಾಮೃತದಲ್ಲಿ ಅನೇಕವಿವೆ.

ಇತರ ಮತಗಳನ್ನು ಖಂಡಿಸುವುದೂ ಹಾಸ್ಯಮಾಡುವುದೂ ಒಂದುಪಕ್ಷದಿಂದ ಮಾತ್ರ ನಡೆಯುವುದು ಅಸಾಧ್ಯ. ಎರಡು

ಕ್ಕೆ ಸೇರಿದರೆ ತಾನೆ ಚಪ್ಪಾಳೆ! ವೈದಿಕಮತದವರೂ ಬೌದ್ಧರೂ ಜೈನರನ್ನು ಹಾಸ್ಯಮಾಡುತ್ತಿದ್ದರೆಂದು ಕಾಣುತ್ತದೆ. ಅದಕ್ಕೆ ಪ್ರತ್ಯುತ್ತರವಾಗಿ ಜೈನರು ಅವರನ್ನು ಕುಚೋದ್ಯಮಾಡುತ್ತಿದ್ದರು. ಈಗ ತ್ರಿಮತಸ್ಥಬ್ರಾಹ್ಮಣರಲ್ಲಿ ಒಬ್ಬರಮೇಲೊಬ್ಬರು ಕಥೆಗಳನ್ನು ಕಟ್ಟಿ ಅಪಹಾಸ್ಯಮಾಡುವುದನ್ನು ಕೇಳಿ ನೋಡಿರುವವರಿಗೆ ಇದು ವಿಚಿತ್ರವಾಗಿ ತೋರಲಾರದು. ಆದರೆ ನಯಸೇನನ ಗ್ರಂಥವನ್ನು ಓದುವವರಿಗೆ ಒಂದು ದೊಡ್ಡ ಸಮಾಧಾನವೇನೆಂದರೆ ಈ ಅಪಹಾಸ್ಯಕ್ಕೆ ಆತನು ಒಂದು ಮಿತಿಯನ್ನು ಒಡ್ಡಿದ್ದಾನೆಂಬುದು. ಸುಮಾರು ನಯಸೇನನ ಕಾಲದಲ್ಲಿಯೇ ಇದ್ದ ಇತರ ಕೆಲವು ಕವಿಗಳು ಮರ್ಯಾದೆಯ ಮೇರೆಯನ್ನೂ ಮೀರಿರುವುದು ಕಾಣಬರುತ್ತದೆ. ಬ್ರಹ್ಮಶಿವ(೧೧೨೫) ವೃತ್ತವಿಲಾಸ (೧೧೬೦) ಎಂಬ ಕವಿಗಳು ಇದನ್ನೇ ತಮ್ಮ ಕಾವ್ಯವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ವೃತ್ತವಿಲಾಸನು ತನ್ನ ಶಾಸ್ತ್ರಸಾರ*ವೆಂಬ ಗ್ರಂಥದಲ್ಲಿ ವೈದಿಕದೇವತೆಗಳ ವರಪ್ರದಾನಶಕ್ತಿಯನ್ನು ಗೇಲಿಮಾಡಿದ್ದಾನೆ.

"ಆ ದೈವಂ ವರವನೀವಂದಂ ಏಂತುಟೆಂದೊಡೆ, ಬಂಜೆಯ ಪೆರ್ಮಗಂ, ಮೃಗತೃಷ್ಣಾಂಬುವಂ ಮಿಂದು, ಕಲ್ಲನಾರ ಸೀರೆಯನುಟ್ಟು, ಆಗಸವೂದುಃಟಿುಂಬಿ, ಮೊಲದಕೋಡ ಬಿಲ್ವಿಡಿದು ಬರುತ್ತಿರ್ಪುದಂ, ಪುಟ್ಟುಂಗುರುಡಂ ಅಂಧಕಾರದ ನಟ್ಟನಡುವಿರುಳೊಳ್ ಕಂಡನೆಂಬಂತೆ ನಿಷ್ಫಲಂ, ಕ್ಲೇಶಂ, ದುರ್ಗತಿ ದುಃಖಮೇ ಅಕ್ಕುಂ, ಆದೈವಂ ಪೆಱರ್ಗೀವುದುಂ ಕಾವುದುಂ ಅಂತಿರ್ಕೆ ತಮಗೆಂದು ಸಂಕಲ್ಪಿಸಿದ ವಸ್ತುವಂ ಕಾಯಲಾಱರ್."

---

* ಪ್ರಾಕ್ಕಾವ್ಯಮಾಲಿಕೆಯಲ್ಲಿ ಈ ಗ್ರಂಥದಿಂದ ಕೆಲವು ಭಾಗಗಳನ್ನು ಉದ್ಧರಿಸಿದ್ದಾರೆ. ಪುಟ ೪೦೧.

ಧರ್ಮಪರೀಕ್ಷೆಯೆಂಬ ಇನ್ನೊಂದು ಗ್ರಂಥದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ರುದ್ರರ ವಿಚಾರದಲ್ಲಿ ಇದ್ದ, ಇಲ್ಲದಿರುವ ಅನೇಕ ಕಥೆಗಳಿಗೆ ಅಪಾರ್ಥಗಳನ್ನು ಕಲ್ಪಿಸಿ ಅವರಿಂದ ಅನೇಕ ಪಾಶವೀಕೃತ್ಯಗಳನ್ನುಮಾಡಿಸಿ ಅವರನ್ನು ಅಧಮಾಧಮರಾಕ್ಷಸರಾಗುವಂತೆ ಚಿತ್ರಿಸಿದ್ದಾನೆ. ಇವೆಲ್ಲವನ್ನೂ ನೋಡಿದರೆ ಎರಡು ಮತದವರೂ ಎಷ್ಟುದೂರ ಹೋಗುತ್ತಿದ್ದರೆಂಬುದು ವ್ಯಕ್ತವಾಗುತ್ತದೆ. ನಯಸೇನನಲ್ಲಿ ಈ ತರದ ಮನೋವೃತ್ತಿಯಿಲ್ಲವೆಂಬುದು ಅತಿಪ್ರಿಯವಾದ ವಿಷಯ. ತನ್ನ ಮತಪ್ರಚಾರಕ್ಕೆ ಇತರ ಮತಗಳ ಅವಹೇಳನವೇನೂ ಅತ್ಯಾವಶ್ಯಕವಲ್ಲ; ಅದು ಒಂದುವೇಳೆ ಅಡ್ಡಿಯಾದರೂ ಆಗಬಹುದು ಎಂಬುದನ್ನು ನಯಸೇನನು ಅರಿತಿದ್ದಂತೆ ಕಂಡುಬರುತ್ತದೆ. ಆದುದರಿಂದಲೇ ಅವನ ಕಾವ್ಯದಲ್ಲಿ ವೃತ್ತವಿಲಾಸ ಬ್ರಹ್ಮಶಿವರ ಹಾಗೆ ಒರಟೊರಟಾಗಿ ಆಡಿರುವ ಕಟೂಕ್ತಿಗಳು ಕಂಡುಬರುವುದಿಲ್ಲ.

ಈ ಪುಸ್ತಕದಲ್ಲಿ ಕೊಟ್ಟಿರುವ ಮೊದಲನೆಯ ಕಥೆಯಲ್ಲಿ ವೈದಿಕಮತವನ್ನು ವಿಡಂಬನಮಾಡಿರುವುದು ಕಂಡುಬರುತ್ತದೆ. ವೈದಿಕಜನದ ದುರಾಸೆಯನ್ನೂ, ದುರಭಿಮಾನವನ್ನೂ ಅಲ್ಲಿ ಕೆಣಕಿದ್ದಾನೆ. ತನ್ನ ಮತದ ಮಾರ್ಗವೇ ಮೇಲೆಂದು ಹೇಳಿದ್ದಾನೆ. ಆದರೆ ಹೇಳುವುದನ್ನು ಸೌಮ್ಯವಾಗಿ ಹೇಳಿದ್ದಾನೆ.

ಮತ್ತೊಂದು ಕಥೆಯಲ್ಲಿ ಒಬ್ಬ ಮಹಾರಾಣಿಯ ಸಮ್ಯಕ್ತ್ವವನ್ನು ಪರೀಕ್ಷಿಸುವುದಕ್ಕಾಗಿ ಒಬ್ಬ ಜೈನ ಸಂನ್ಯಾಸಿಯು ಬ್ರಹ್ಮ ವಿಷ್ಣು ರುದ್ರರ ವೇಷಗಳನ್ನು ಧರಿಸಿ ಅವಳ ಪಟ್ಟಣಕ್ಕೆ ಬರುತ್ತಾನೆ. ಜನರೆಲ್ಲರೂ ಬಂದು ಪೂಜಿಸಿ ಹೋದರೂ ರಾಣಿ ಅಲ್ಲಿಗೆ ಬರದೆ ತನ್ನ ದೃಢವಾದ ನಂಬಿಕೆಯನ್ನು ವ್ಯಕ್ತಪಡಿಸುತ್ತಾಳೆ. ಅಲ್ಲಿ ವೈದಿಕ ದೇವತೆಗಳನ್ನು ಅಣಕಿಸಿರುವುದು ಕಂಡುಬರುತ್ತದೆ.

ಕುಧರ್ಮಿಗೆ ಜೈನಮತವು ಕೋಪವನ್ನುಂಟುಮಾಡುತ್ತದೆ, ಆದರೆ ತಪ್ಪು ಅವನಲ್ಲಿಯೇ ಇದೆ ಎಂಬುದನ್ನು ಕವಿ ಹೇಳಿರುವ ರೀತಿಯಿದು.

ಕನ್ನಡಿಯಂ ತೋಱಿದೊಡೆ-ಅ
ತ್ಯುನ್ನತ ಸಲ್ಲಕ್ಷಣಂಗೆ ಮುನಿಸಾಗದು ಮ
ತ್ತೆನ್ನದೆ ಮೂಕೊಱೆ§ಯಂಗೆಱ
ಕನ್ನಡಿಯಂ ತೋಱೆ ಬಡಿವನ್-ಇ[illegible]ವನ್-ಕೊಲ್ವಂ ||

§ಮೂಗಿಲ್ಲದವನು

ಇನ್ನೊಂದು ಕಡೆ ಲೋಕದ ಮೂರ್ಖತನವನ್ನು ಹಳಿಯುವುದಕ್ಕಾಗಿ ವೈದಿಕ ಜನರ ಜೀವನದಿಂದ ಒಂದು ಉಪಮಾನವನ್ನು ತೆಗೆದುಕೊಂಡಿದ್ದಾನೆ. “ಹೋಮಮಂ ಮಾಡುವ ಬ್ರಾಹ್ಮಣಂ ನೊಣವು ಬೆನ್ನನೂಱಿದೊಡೆ ಸೈರಿಸಲಾಱದೆ ಬೆನ್ನಂ ಪೊಯ್ದುಕೊಳ್ವುದುಂ ಕೆಲದೊಳಿರ್ದವರೆಲ್ಲಂ ಕೊಡನ ತುಪ್ಪದೊಳ್ ಕೈಯನದ್ದಿ ತಮ್ಮ ಬೆನ್ಗಳಂ ಪೊಯ್ದುಕೊಂಡರೆಂಬಂತೆ.” ದೊಡ್ಡವರು ಮಾಡಿದ್ದನ್ನೇ ಮಾಡಲು ಜನರು ಹೇಗೆ ನುಗ್ಗುತ್ತಿದ್ದರೆಂಬುದನ್ನು ಹಾಸ್ಯಮಾಡಿರುವುದು ಇಲ್ಲಿ ಕಾಣುತ್ತದೆ.

ಸತ್ಯವ್ರತದ ಕಥೆಯನ್ನು ಹೇಳುತ್ತಾ ಬೌದ್ಧನೊಬ್ಬನ ಚಂಚಲತೆಯನ್ನು ವರ್ಣಿಸಿದ್ದಾನೆ. ಆತನು ಜೈನಧರ್ಮದ ಹಿರಿಮೆಯನ್ನು ಕೇಳಿ ಆ ಮತಕ್ಕೆ ಸೇರುತ್ತಾನೆ. ಆದರೆ ತನ್ನ ಗುರುಗಳು ಬಂದು ಬೆದರಿಸಲು ಮತ್ತೆ ತನ್ನ ಮತಕ್ಕೆ ಸೇರುತ್ತಾನೆ. ಅಷ್ಟೇ ಅಲ್ಲದೆ ತಾನು ಮಾಡಿದ ಕಾರ್ಯವನ್ನು ಸಾಧಿಸುವುದಕ್ಕಾಗಿ ಸುಳ್ಳನ್ನು ನುಡಿಯುತ್ತಾನೆ. ಆ ಸಂದರ್ಭದಲ್ಲಿ ಎರಡು ಉಪಮಾನಗಳ ಮೂಲಕ ಜೈನರಲ್ಲದವರು ಶ್ರೇಷ್ಠರಲ್ಲವೆಂಬ ಅಂಶವನ್ನು ಸೂಚಿಸಲು ಕವಿ ಪ್ರಯತ್ನಪಟ್ಟಿದ್ದಾನೆ.

"ಹೆಪ್ಪಿಟ್ಟೊಡೆ ಪಾಲ್ ಮೊಸರಾ
ಗಿಪ್ಪಂತಿರೆ ನೀರ್ಗಳಾಗಲಱಿಗುಮೆ ?"
"ಕಾಸಿದೊಡೆ ಬೆಣ್ಣೆ ತುಪ್ಪಂ
ಲೇಸಪ್ಪವೊಲೆಣ್ಣೆ ಕಾಸೆ ಘೃತಮಪ್ಪುದೇ ?"

ಹೀಗೆ ಇತರ ಮತಗಳನ್ನು ನಯಸೇನನು ಹಳಿದರೂ ಎಲ್ಲಿಯೂ ತನ್ನ ಸೌಮ್ಯತೆಯನ್ನು ಬಿಟ್ಟಿಲ್ಲ. ಅವನ ಕಾವ್ಯ ಜನಪ್ರಿಯವಾಗುವುದಕ್ಕೆ ಇದೂ ಒಂದು ಕಾರಣ.

---

೮. ನಯಸೇನನ ಉಪಮಾನಗಳು

ನಯಸೇನನ ಕಾವ್ಯೋದ್ಯಾನದಲ್ಲಿ ಆತನ ಉಪಮಾನಗಳು ಬಹು ಸವಿಯಾದ ಹಣ್ಣುಗಳು. ಅವನ್ನು ಸವಿಯದೆ ಉದ್ಯಾನದ ಸುಖವನ್ನು ಎಷ್ಟು ಅನುಭವಿಸಿದರೂ ಅದು ಅಪೂರ್ಣ. ಜನಜೀವನವನ್ನು ತೀವ್ರವಾಗಿ ದೃಷ್ಟಿಸಿ ಲೋಕದ ಸುಖದುಃಖಗಳ ಅನಂತಮುಖಗಳನ್ನು ಆತನು ಅರಿತಿದ್ದನು. ಜೀವನದ ಪ್ರತಿಯೊಂದು ಮುಖದಲ್ಲಿಯೂ ಒಂದೊಂದು ಹೊಸ ಉಪಮಾನವು ಅವನಿಗೆ ಹೊಳೆಯುತ್ತಿದ್ದಿತು. ಅವನ ಕಾವ್ಯದಿಂದ ಇದು ವ್ಯಕ್ತವಾಗುತ್ತದೆ. ಇದಲ್ಲದೆ ಮತ್ತೊಂದು ಜಾಣ್ಮೆಯೂ ನಯಸೇನನಲ್ಲಿ ಕಂಡುಬರುತ್ತದೆ. ಒಂದೇ ವಿಷಯವನ್ನು ವರ್ಣಿಸುವುದಕ್ಕೆ ಅನೇಕ ಉಪಮಾನಗಳನ್ನು ಆತನು ಉಪಯೋಗಿಸುತ್ತಾನೆ. ಒಂದರಹಿಂದೊಂದು ಉಪಮಾನವು ಹೊಂದಿಕೊಂಡು

ಬಂದು ಅನೇಕ ಮಣಿಗಳಿಂದ ಕೂಡಿದ ಏಕಾವಳಿಯಂತೆ ಮನೋಹರವಾಗಿರುತ್ತದೆ. ಉಪಮೆಯ ಅರ್ಥವನ್ನು ವಿವರಿಸುವುದಕ್ಕೆ ಒಂದು ಉಪಮಾನ ಸಾಲದಿದ್ದರೆ ಅದರ ಹಿಂದೆ ಮತ್ತೊಂದು ಸಿದ್ಧವಾಗಿದೆ. ಅಂತೂ ಕವಿಯ ಅರ್ಥ ಸ್ಫುಟವಾಗಿ ತಿಳಿಯುತ್ತದೆ. ಜನರು ತಮ್ಮ ನಿತ್ಯಜೀವನದಲ್ಲಿ ತಾವೇ ಕಂಡು ಮರೆತಿದ್ದ ಅನೇಕ ಸನ್ನಿವೇಶಗಳನ್ನು ಈ ಉಪಮಾನಗಳು ಜ್ಞಾಪಕಕ್ಕೆ ತರುತ್ತವೆ.

ಕೊಸಗಿನ ರಜಮಂ ಪೀರ್ದು-ಅ
ಟ್ಕಿಸಲಾಱದೆ ಮುಗುಱೆ ತುಂಬಿಗಳ್—ಕಾಱುವುವೆಂ
ಬೆಸಕದಿನೊರ್ವಳ ಕುರುಳೊ
ಳ್ಪಸೊೀಭೆಯಿಂ ಚೆನ್ನಪೂಗಳೇನೊಪ್ಪಿದುವೋ ॥

ಇಲ್ಲಿ ಸ್ತ್ರೀಯೊಬ್ಬಳು ಹೂಮುಡಿದಿದ್ದುದನ್ನು ಕವಿ ವರ್ಣಿಸಿದ್ದಾನೆ. ಕಪ್ಪಗಿದ್ದ ತುರುಬಿನ ಕೂದಲಿನಲ್ಲಿ ಬಿಳಿಯ ಹೂಗಳು ಸೊಗಸಿದವು. ಬೆಟ್ಟದಾವರೆಯ ಹೂವಿನ ಧೂಳಿಯನ್ನು ಸೇವಿಸಿದ ತುಂಬಿಗಳು ಅದನ್ನು ಅರಗಿಸಲಾರದೆ ಮತ್ತೆ ಹೊರಕ್ಕೆ ಹಾಕುತ್ತಿವೆಯೋ ಎನ್ನುವಂತೆ ಅದು ಸೊಗಸಿತು. ಇಲ್ಲಿ ಆ ಹೂವು ತುರುಬಿನಲ್ಲಿ ಅರ್ಧ ಮುಚ್ಚಿ ಅರ್ಧ ಹೊರಗಿದ್ದು ಅದರೊಂದಿಗೆ ಹೊಂದಿಕೊಂಡಿದ್ದ ಆ ದೃಶ್ಯವು ಮನೋಹರವಾಗಿದೆ. ಇದರ ಸ್ವಾರಸ್ಯವನ್ನು ವಿವರಿಸುವುದಕ್ಕಿಂತ ಹೆಚ್ಚಾಗಿ ಅನುಭವಿಸಬೇಕು.

ಅನೇಕ ಉಪಮಾನಗಳು ಒಟ್ಟಿಗೆ ಬರುವುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಒಬ್ಬ ಗುರುವಿನಲ್ಲಿ ಅನೇಕರು ಬಿಲ್ವಿದ್ಯೆಯನ್ನು ಕಲಿಯುತ್ತಿರುತ್ತಾರೆ. ಒಬ್ಬ ರಾಜ

ಕುಮಾರನು ಅವರೆಲ್ಲರಿಗಿಂತಲೂ ಉತ್ತಮನಾಗಿರುತ್ತಾನೆ. ಅವನನ್ನು ಕಂಡರೆ ಇತರರಿಗೆ ಆಗುತ್ತಿರಲಿಲ್ಲ. ಆಗ ಗುರುವು ಒಂದು ಕಷ್ಟವಾದ ಕೆಲಸವನ್ನು ಎಲ್ಲರಿಗೂ ನಿಯಮಿಸುತ್ತಾನೆ. ಆ ಕೆಲಸವನ್ನು ಮಾಡಲಾರದ ಶಿಷ್ಯರು ಹೇಗಿದ್ದರೆಂಬುದು ಇಲ್ಲಿ ವರ್ಣಿತವಾಗಿದೆ.

"ಬಿರುದರೊಳ್ ತೊಡರ್ದ ಪಂದೆಯಂತೆ ಕುಂದಿ, ಸಂತತಿಯಿಲ್ಲದರ್ಥಪತಿಯಂತೆ ಮಱುಗಿ, ಜವ್ವನೆಗಾಳ್ದನಾದ[43] ಮುದುಪನಂತೆ ಪಲ್ಗಡಿಗಿಱಿದು, ರಾಹುವಿಂ ಪಿಡಿವೆತ್ತ ಚಂದ್ರನಂತೆ ಮನದೊಳ್ ಕಂದಿ, ತೋರತೆನೆಯಂತೆ ತಲೆಯಂ ಬಾಗಿರ್ಪುದುಂ."

ಇಲ್ಲಿ ಒಂದೊಂದು ಉಪಮಾನವೂ ಕವಿಯ ಅರ್ಥವನ್ನು ವಿವರಿಸುವುದಾದರೂ, ಕೊನೆಯ 'ತೋರತೆನೆಯಂತೆ ತಲೆವಾಗಿರ್ಪುದುಂ' ಎಂಬುದು ಒಟ್ಟು ಸನ್ನಿವೇಶವನ್ನು ಮನದಟ್ಟುವಂತೆ ಚಿತ್ರಿಸುತ್ತದೆ. ಇಂತಹ ಉಪಮಾನಗಳು ನಯಸೇನನಲ್ಲಿ ನೂರಾರು ಇವೆ.

ಜನಜೀವನದ ಸನ್ನಿವೇಶಗಳಿಂದ ನಯಸೇನನು ಹೇಗೆ ಉಪಮಾನಗಳನ್ನು ಹುಡುಕುತ್ತಿದ್ದಾನೆಂಬುದು ಆಶ್ಚರ್ಯಜನಕವಾಗಿದೆ. ರಾಜಕುಮಾರನೊಬ್ಬನು ಪ್ರಜೆಗಳಿಗೆ ಚಿತ್ರಹಿಂಸೆಯನ್ನು ಕೊಡುತ್ತಿರುತ್ತಾನೆ. ಆಗ ಜನರು ಹೀಗೆ ಮಾತಾಡಿಕೊಳ್ಳುತ್ತಾರೆ.

ಸುತನೆಂದು ಮನ್ನಿಪಂ ಕ್ಷಿತಿ
ಪತಿ ತುಪ್ಪದ ಕೊಡನ ಮೇಗಣ-ಇಲಿ-ಅತಂ ||

---

[43] ಒಡೆಯ.

ತುಪ್ಪದ ಗಡಿಗೆಯ ಮೇಲಿರುವ ಇಲಿಯನ್ನು ಹೊಡೆದರೆ ಮಡಕೆ ಒಡೆದು ತುಪ್ಪ ಚೆಲ್ಲಿಹೋಗುತ್ತದೆ. ಹೊಡೆಯದೆ ಇದ್ದರೆ ಇಲಿಯೇ ತಿಂದುಬಿಡುತ್ತದೆ. ಏನು ಮಾಡಬೇಕು ? ರಾಜನಿಗೆ ಪುತ್ರನ ಮೇಲಿನ ಪ್ರೇಮದಿಂದ ಅವನನ್ನು ಶಿಕ್ಷಿಸುವುದಕ್ಕೂ ಇಲ್ಲದೆ ಸುಮ್ಮನಿರುವುದಕ್ಕೂ ಇಲ್ಲದೆ ತೊಂದರೆಯಾಗಿದೆ. ಇಂಥ ಅರ್ಥಗರ್ಭಿತವಾದ ಉಪಮಾನಗಳು ಧರ್ಮಾಮೃತದಲ್ಲಿ ಅನೇಕವಿವೆ. ಶಾಶ್ವತವಾದ ಜೈನಧರ್ಮವನ್ನು ಬಿಟ್ಟು ಮಿಕ್ಕ ಧರ್ಮಗಳನ್ನು ಸೇರುವುದು ಎಷ್ಟು ಅನುಚಿತವೆಂಬುದನ್ನು ಹೇಳುವುದಕ್ಕೆ " ಮೂರು ದಿನದ ಪಗರಣಕ್ಕೆ ಗಡ್ಡ ಮೀಸೆ ಮಂಡೆಯಂ ಬೋಳಿಸಿಕೊಳ್ವಂತೆ " ಎಂಬ ಉಪಮಾನವನ್ನು ಕವಿ ಕೊಟ್ಟಿದ್ದಾನೆ. ಗಡ್ಡ ಮೀಸೆ ಜುಟ್ಟುಗಳು ಗಂಡಸಿಗೆ ಶಾಶ್ವತವಾದುವು. ನಾಟಕದಲ್ಲಿ ಸ್ತ್ರೀ ಪಾತ್ರವನ್ನು ಧರಿಸುವುದಕ್ಕಾಗಿ—ಒಂದು ದಿನದ ಸೊಗಸಿಗಾಗಿ—ಅವೆಲ್ಲವನ್ನೂ ಬೋಳಿಸಿಕೊಳ್ಳುವುದು ಹೇಗೋ ಬೇರೆ ಧರ್ಮಗಳನ್ನು ಸೇವಿಸುವುದೂ ಹಾಗೆಯೇ.

ಜೈನ ಧರ್ಮದಲ್ಲಿ ನಂಬಿಕೆಯಿಲ್ಲದೆ ಮಾಡುವ ಕೆಲಸವು ವ್ಯರ್ಥವಾಗುತ್ತದೆಂಬುದನ್ನು ಸೂಚಿಸುವುದಕ್ಕೆ ಈ ಉಪಮಾನಗಳು—

" ದಾರಮಂ ಪೊಸೆಯದೆ ಮಣಿಯಂ ಕೋವಂತೆ "

" ಕೂಟಿಲ್ಲದೆ ಮದ್ದಳೆಯಂ ಬಡಿವಂತೆ "

" ಬಿದಿರೆಲೆಯಲ್ಲಿ ರಸಮನಟಿಸುವಂತೆ "

ತನ್ನ ಶಕ್ತಿಯನ್ನು ತಿಳಿಯದೆ ಕೆಲಸಮಾಡುವುದು ಹಾಸ್ಯಾಸ್ಪದವೆಂಬುದಕ್ಕೆ ಮತ್ತೆರಡು ಉಪಮಾನಗಳು—

" ಸೊಬಗಿಗೆ ಸವತಿಯಾದಳೆಂಬಂತೆ,"

" ಜೋಯಿಸನ ಮಗಳು ಪಸೆಯಮೇಲೆ ರಂಡೆಯಾದಳೆಂಬಂತೆ "

ಮುನಿಗಳ ಸೇವೆಯನ್ನು ಹೇಗೆ ಮಾಡಬೇಕೆಂಬುದನ್ನು ಮತ್ತೆ ಕೆಲವು ಉಪಮಾನಗಳ ಮೂಲಕ ಕವಿ ವಿವರಿಸುತ್ತಾನೆ.

" ಜೀವಿತಂ*ಗುಡದಾಳ್ದನ ಬೆಸಕ್ಕಂಜುವ ಬಂಟನಂತೆ ಮನದೊಳ್ ಜರಿಯದೆ "

*ಕೂಲಿ

" ಅಳಿಯನಂ ಕಂಡೆತ್ತೆ[illegible]ಂತೆ ಲಜ್ಜಿಸದೆ "

" ಕೀಱ್ಜಾತಿಯಂ ಕಂಡ ಕುಲಜನಂತುದಾಸೀನಂಗೆಯ್ಯದೆ "

ಈ ಎಲ್ಲ ಉಪಮಾನಗಳಲ್ಲಿಯೂ ನಯಸೇನನ ಜೀವನಾನುಭವ ವ್ಯಕ್ತವಾಗಿದೆ. ಅವನ ದೃಷ್ಟಿ ಎಷ್ಟು ಸೂಕ್ಷ್ಮವಾದುದು, ಹೇಗೆ ಎಂತಹ ಸಣ್ಣ ವಿಷಯವನ್ನಾದರೂ ಸ್ವಾರಸ್ಯವಾಗಿ ಮಾಡಬಲ್ಲದು ಎಂಬುದು ಇವುಗಳಿಂದ ಚೆನ್ನಾಗಿ ಸೂಚಿತವಾಗುತ್ತದೆ. ನಯಸೇನನ ಉಪಮಾನಗಳ ವೈಶಿಷ್ಟ್ಯವು ಇಷ್ಟಕ್ಕೇ ಪೂರೈಸಲಿಲ್ಲ. ಅವನಲ್ಲಿ ಬರುವ ಎಷ್ಟೋ ಉಪಮಾನಗಳೂ ದೃಷ್ಟಾಂತರಗಳೂ ಗಾದೆ ಮಾತಿನಂತಿವೆ. ಅವು ಜನರ ಬಾಯಿ ಮಾತಿನಲ್ಲಿ ಅಂದು ಬದುಕಿದ್ದಿರಬಹುದು. ಇವುಗಳನ್ನು ನೋಡಿ:

" ಮರುಳ ಪಯಣಕ್ಕೆ ತಱಿಗೆಲೆಯೆ ಸಂಗಡಿಗನೆಂಬಂತೆ "

" ಪೆಂಡಿರ ದೋಷಕ್ಕೆ ಮಕ್ಕಳ ಮೂಗಂ ಕೊಯ್ದರೆಂಬಂತೆ "

" ತ್ರಾಸಿನಕೊಡನೊಂದು ಬಿದ್ದೊಡೊಂದುಳಿದಪುದೇ? "

" ಸೆಟ್ಟಿಯ ಮಾತೊಳ್ಳಿದುವು ಬಳ್ಳಂಕಿಱಿದು ಎಂಬಂತೆ "

" ಪ್ರೀತಿಯಾಕೆ ಓತಿಯಾದಳೆಂಬಂತೆ "

" ಕೊರಲ ಸತ್ವವಿಲ್ಲದೆ ಒರಲಂ ನುಂಗಿದರೆಂಬಾತೆ "

" ಗಡ್ಡಂಬಾರದೆ ಅಂದವಿಡುವೆನೆಂಬಂತೆ "

ಈ ಮಾತುಗಳಲ್ಲಿ ಅಡಗಿರುವ ಹಾಸ್ಯಪ್ರವೃತ್ತಿ ಗೋಚರವಾಗುವುದು ಕಷ್ಟವೇನೂ ಅಲ್ಲ. ಇವುಗಳಿಂದ ನಯಸೇನನ ವ್ಯಕ್ತಿತ್ವವೂ ಸ್ವಲ್ಪಮಟ್ಟಿಗೆ ಗೊತ್ತಾಗುತ್ತದೆ. ಅವನಿಗೆ ತನ್ನ ಧರ್ಮದಲ್ಲಿ ಉತ್ಕಟವಾದ ಅಭಿಮಾನವಿತ್ತು. ಆದರೆ ಅದು ದುರಭಿಮಾನವಾಗಿರಲಿಲ್ಲ. ಅವನಿಗೆ ಇತರ ಮತೀಯರನ್ನು ಜೈನರನ್ನಾಗಿ ಮಾಡಬೇಕೆಂಬ ಆಸೆ ಎಷ್ಟು ಇದ್ದಿತೋ ಅಷ್ಟೇ ಆಸೆ ತನ್ನ ಮತದವರ ರೀತಿನೀತಿಗಳನ್ನು ತಿದ್ದುವುದರಲ್ಲಿಯೂ ಇದ್ದುದು ಚೆನ್ನಾಗಿ ಗೊತ್ತಾಗುತ್ತದೆ. ಜೀವನವನ್ನು ನಿಟ್ಟಿಸಿ ಅದರಿಂದ ಬುದ್ಧಿ ಕಲಿಯುವ ಆಸಕ್ತಿ ಆತನಲ್ಲಿದ್ದಿತು. ಆತನು ಧರ್ಮಾಭಿಮಾನಿಯೂ ನ್ಯಾಯಪಕ್ಷಪಾತಿಯೂ ಆಗಿದ್ದನೆಂಬುದರಲ್ಲಿ ಸಂದೇಹವಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಧರ್ಮಾಮೃತದಲ್ಲಿ* "ಎಲ್ಲೆಲ್ಲಿ ನೋಡಿದರೂ ಉಪಮೆ; ಸರಪಣಿಯಂತೆ ಸಾಲುಹಿಡಿದು ಬರುವ ಉಪಮೆ ; ಪ್ರತಿಯೊಬ್ಬನೂ ತನ್ನ ಸುತ್ತಮುತ್ತಿನ ದೈನಂದಿನ ಪ್ರಪಂಚದಲ್ಲಿ ನೋಡಿರಬಹುದಾದ ಸಂಗತಿಗಳ ಸಾದೃಶ್ಯ ; ಎಲ್ಲರ ಬಾಯಲ್ಲಿಯೂ ಇದ್ದಿರಬಹುದಾದ ಗಾದೆಗಳು, ಸಾಮತಿಗಳು. ಇವು ಹೆಚ್ಚಾಗಿಯೇ ಇರುವುದರಿಂದ ಒಂದು ವಿಧವಾದ ಚಮತ್ಕಾರರಾಹಿತ್ಯವೂ ನೀರಸತೆಯೂ ಅನವೀಕೃತತ್ವವೂ ಪಂಡಿತರಾದವರಿಗೆ ತೋರಬಹುದು. ಆದರೆ ಸಾಮಾನ್ಯ ಜನರಿಗೆ ಇವು ಮನಸ್ಸಿಗೆ ಹಿಡಿಯುವಷ್ಟು ಕಾವ್ಯದ ಚಮತ್ಕಾರವಿಶೇಷಗಳೂ ಅಲಂಕಾರ ವೈಚಿತ್ರ್ಯಗಳೂ ಹಿಡಿಯುವುದಿಲ್ಲ. ಆದ್ದರಿಂದಲೇ ಈ ಗ್ರಂಥವು ಕುಮಾರವ್ಯಾಸಭಾರತ, ತೊರವೆಯ ರಾಮಾಯಣ ಮುಂತಾದ ಗ್ರಂಥಗಳಂತೆ ಜನಸಾಮಾನ್ಯರಂಜಕ

*ಧರ್ಮಾಮೃತದ ಉಪೋದ್ಘಾತ—ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರು

ವಾಗಿದ್ದಂತೆ ತೋರುತ್ತದೆ. ಇವುಗಳಲ್ಲಿ ಕಂಡುಬರುವ ಪಾ
ಭೇದಗಳೂ, ಅಧಿಕಪಾಠಗಳೂ, ಪ್ರಕ್ಷೇಪಗಳೂ, ಈ ಗ್ರಂ
ಗಳು ಜನರಲ್ಲಿ ಬಹಳವಾಗಿ ಬಳಕೆಯಲ್ಲಿದ್ದಿರಬೇಕೆಂಬುದ
ಸಾಕ್ಷಿಗಳಾಗಿವೆ."

---

೬. ಉಪಸಂಹಾರ

ಧರ್ಮಾಮೃತದ ಸಣ್ಣಕಥೆ†ಗಳನ್ನು ಓದಿ ಅವುಗಳ ಸ್ವಾ
ಸ್ಯವನ್ನು ತಿಳಿದಮೇಲೆ ನಯಸೇನನಿಗೆ ಕನ್ನಡಸಾಹಿತ್ಯದಲ್ಲಿ
ಯಾವಸ್ಥಾನವೆಂಬ ಪ್ರಶ್ನೆ ಏಳುತ್ತದೆ. ಕನ್ನಡಸಾಹಿತ್ಯದ
ಪ್ರಥಮಶ್ರೇಣಿಯ ಕವಿಗಳಲ್ಲಿ ನಯಸೇನನೂ ಒಬ್ಬನೆಂದ

† ಧರ್ಮಾಮೃತದ ಕಥೆಗಳನ್ನು ಸಣ್ಣಕಥೆಗಳು ಎಂದು ಕರೆಯ
ಬಹುದೇ ಎಂಬುದು ಒಂದು ಪ್ರಶ್ನೆ. ಆಧುನಿಕ ಕನ್ನಡಸಾಹಿತ್ಯದಲ್ಲಿ
'ಸಣ್ಣಕಥೆ'ಯೆಂಬುದು ಇಂಗ್ಲಿಷಿನ 'Short Story' ಎಂಬುದಕ್ಕೆ
ಪ್ರತಿಯಾಗಿ ಉಪಯೋಗಿಸುತ್ತಿರುವ ಪದ. ಈ ಸಂದರ್ಭದಲ್ಲಿ ಅದಕ್ಕೆ
ಒಂದು ವಿಶಿಷ್ಟವಾದ ಅರ್ಥವಿದೆ. ಈ ಅರ್ಥದಪ್ರಕಾರ ಸಣ್ಣಕಥೆಯು
ಒಂದು ಕಲಾಕೃತಿ. ಅದರಲ್ಲಿ ಒಂದು ವಿಧವಾದ ಸಂಪೂರ್ಣತೆ, ಐಕ್ಯ,
ಕಮನೀಯತೆ ಇರುತ್ತವೆ. ಸಣ್ಣಕಥೆಯು ನಮಗೆ ಇಂಗ್ಲಿಷಿನಿಂದ ಬಂದಿ
ತೆಂಬುದರಲ್ಲಿ ಸಂದೇಹವಿಲ್ಲ. ಅವು ನಮ್ಮಲ್ಲಿಯೇ ಹುಟ್ಟಿ ನಮ್ಮಲ್ಲಿಯೇ
ಬೆಳೆಯಿತು ಎಂದು ಹೇಳಬಯಸುವ ಕೆಲವರು ನಯಸೇನನ ಈ ಕಥೆ
ಗಳನ್ನು ಬೆರಳಿಟ್ಟು ತೋರಿಸುತ್ತಾರೆ. ಈ ಕಥೆಗಳು ಚಿಕ್ಕವಾಗಿವೆ ಎಂಬ
ರ್ಥದಲ್ಲಿ ಮಾತ್ರ ಇವು ಸಣ್ಣಕಥೆಗಳು. ಆಧುನಿಕ ಸಾಹಿತ್ಯದ ಸಣ್ಣ ಕಥೆ
ಗಳಿಗೂ ಇವಕ್ಕೂ ಯಾವ ಸಾಮ್ಯವೂ ಇಲ್ಲ. ಇವೆರಡರ ರೀತಿ ಬೇರೆಬೇರೆ.

ಹೇಳುವ ಧಾರ್ಷ್ಟ್ಯ ನಮಗಿಲ್ಲ. ಆದರೆ ಜನಸಾಮಾನ್ಯಕ್ಕೆ ಪ್ರಯೋಜನವಾಗುವ ಕಾವ್ಯಮಾರ್ಗವೊಂದನ್ನು ರೂಪುಗೊಳಿಸಿ ಕನ್ನಡಸಾಹಿತ್ಯವು ಜನಪ್ರಿಯವಾಗುವಂತೆ ಮಾಡಿದ ಕೆಲಸ ಇವನದು. ಜೈನತತ್ವಗಳನ್ನು ಸಾರುವುದು ಅವನ ಪರಮ ಧ್ಯೇಯ. ಅದನ್ನು ಸಾಧಿಸುವುದಕ್ಕೆ ಮಾರ್ಗ ಈ ಕಥನಮಾರ್ಗ. ನಯಸೇನನ ಮಾರ್ಗಕ್ಕೆ ಅವನೇ ಮಾದರಿ, ಮಾರ್ಗದರ್ಶಿ. ಕಥನರೀತಿಯಲ್ಲಿ ಸುಲಭಮಾರ್ಗವನ್ನನುಸರಿಸಿ, ಜನಸಾಮಾನ್ಯರ ಹೃದಯವನ್ನು ಹಿಡಿದು, ತನ್ನ ಧ್ಯೇಯವನ್ನು ಸಾಧಿಸಿಕೊಂಡಿರುವ ಜಾಣ್ಮೆ ಮಹತ್ತರವಾದುದು. ಒಂದು ದೃಷ್ಟಿಯಿಂದ ನೋಡಿದರೆ ನಯಸೇನನನ್ನು ಹರಿಹರ ರಾಘವಾಂಕರಿಗೆ ಹೋಲಿಸಬಹುದು. ಹರಿಹರನು ರಗಳೆಗಳನ್ನೂ, ರಾಘವಾಂಕನು ಷಟ್ಪದಿಗಳನ್ನೂ ಮೊದಲು ಬರೆದಂತೆ ನಯಸೇನನು ಒಂದು ಹೊಸಮಾದರಿಯ ಕಾವ್ಯರಚನೆ ಮಾಡಿದನು. ಜನಸಾಮಾನ್ಯದ ಪ್ರತಿನಿಧಿಯಾಗಿ ಕವಿಗಳ ಮನಸ್ಸನ್ನು ಇತ್ತಕಡೆಗೆ ಸೆಳೆದನು. ಈ ಕಾರಣದಿಂದಲಾದರೂ ನಯಸೇನನ ಹೆಸರು ಕನ್ನಡ ಸಾಹಿತ್ಯವಿರುವತನಕ ಸುಸ್ಥಾಯಿಯಾಗಿರುತ್ತದೆಂಬುದು ಸತ್ಯವಾದ ಮಾತು.

೩೮. ಸುಭಾಷಿತ ಸಂಗ್ರಹಗಳು- ಎಂ. ಪಿ. ಲಕ್ಷ್ಮೀನೃಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ- ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.

೪೦. ಸಹಕಾರ- ಎಸ್. ಗೋಪಾಲಸ್ವಾಮಿ, ಎಂ.ಎ.

೪೧. ನಯಸೇನ-ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ-ಎಂ. ವಿ. ಕೃಷ್ಣರಾವ್, ಎಂ.ಎ. ಬಿ.ಟಿ.,

* ಈ ಪುಸ್ತಕಗಳು ಮುಗಿದುಹೋಗಿವೆ.

೧೯೪೨ ನೆಯ ಜುಲೈನಿಂದ ಮುಂದಕ್ಕೆ ಅಚ್ಚಾಗುವ ಪುಸ್ತಕಗಳ ಸಾಧಾರಣ ಪ್ರತಿ ೩ ಆಣೆ, ವಾರ್ಷಿಕ ಚಂದಾ (೯ ಪುಸ್ತಕಗಳಿಗೆ) ರೂ. ೧-೪-೦ ; ಉತ್ತಮ ಪ್ರತಿ ೪ ಆಣೆ; ವಾರ್ಷಿಕ ಚಂದಾ (೯ ಪುಸ್ತಕಗಳಿಗೆ) ರೂ. ೨-೦-೦.

ಸಂಪಾದಕ, ಪ್ರಚಾರಪುಸ್ತಕಮಾಲೆ,
ಯೂನಿವರ್ಸಿಟಿ ಆಫೀಸ್, ಮೈಸೂರು.